# ಜನಶ್ರೀ ಟೈಮ್ಸ್

ಕನ್ನಡ ದಿನಪತ್ರಿಕೆ

JANASHREE TIMES KANNADA DAILY NEWS PAPER

PRGI NO : KNKAN/26/A0482

ಜನಶ್ರೀವಾಣಿ

ದುಡ್ಡು ದೊಡ್ಡದೆಂದು ಬೆನ್ನತ್ತಿ ದಡ್ಡರಾಗುವುದಕ್ಕಿಂತ, ಮಾನವೀಯತೆಗೆ ಮೊರೆಹೋದ ಮನಸ್ಸದು ಮನುಷ್ಯತ್ವಕ್ಕೆ ಹಿಡಿದ ಕೈಗನ್ನಡಿ

■ ಆನಂದಯ್ಯ ವಿರಕ್ತಮಠ

ಸಂಪಾದಕರು: ಜನಶ್ರೀ ಟೈಮ್ಸ್

ಸಂಪಾದಕರು: ಆನಂದಯ್ಯ ವಿರಕ್ತಮಠ | ಸಂಪುಟ: 01 ಸಂಚಿಕೆ: 03 ಪುಟಗಳು: 04 ಬೆಲೆ: 02 ರೂ. ದಿನಾಂಕ: 18-06-2026 ಗುರುವಾರ | 73536 56555


## ಕುಡಿಯುವ ನೀರು ಪೂರೈಸುವಂತೆ ಪ.ಪಂ.ಗೆ ಮನವಿ

ಶಿರಹಟ್ಟಿ: ಪಟ್ಟಣದ 16 ನೇ ವಾರ್ಡಿನ ಜನರಿಗೆ ಕಳೆದ 15 ದಿನಗಳಿಂದ ಕುಡಿಯುವ ನೀರು ಪೂರೈಕೆಯಾಗದೇ ಇರುವದರಿಂದ ಮಹಿಳೆಯರು ಹಾಗೂ ಪುರುಷರು ಸೇ-ರಿಕೊಂಡು ಪಟ್ಟಣ ಪಂಚಾಯತಿ ಮುಂದೆ ಖಾಲಿ ಕೊಡಗಳನ್ನು ಪ್ರದರ್ಶಿಸಿದರು. ಕೂಡಲೇ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಪಟ್ಟಣದ ಪಂಚಾಯತ್ ಮುಖ್ಯಾಧಿಕಾರಿ ಸವಿತಾ ತಾಂಬ್ರೆಯವರಿಗೆ ಮನವಿ ಸಲ್ಲಿಸಿದರು.




ಈ ವೇಳೆ ಚನ್ನಪ್ಪಗೌಡ ಮರಿಗೌಡ್ರ ಮಾತನಾಡುತ್ತಾ, 15 ದಿನ ಕಳೆದರೂ ವಾರ್ಡಿನ ಬಡಾವಣೆಗೆ ಕುಡಿಯುವ ನೀರು ಪೂರೈಸದೇ ಇರುವುದರಿಂದ ಸಾರ್ವಜನಿಕರು ಹನಿ ನೀರಿಗಾಗಿ ಪರಿತಪಿಸುವಂತಾಗಿದೆ. ಪಟ್ಟಣ ಪಂಚಾಯತ್‌ಗೆ ಈ ಹಿಂದೆಯೂ ಮನವಿ ಕೊಟ್ಟರೂ ಯಾವುದೇ ಪ್ರಯೋಜವಾಗಿಲ್ಲ. ಕೂಡಲೇ ಕುಡಿಯುವ ನೀರನ್ನು ಪೂರೈಸಬೇಕು ವಿಳಂಬ ಧೋರಣೆ ಮಾಡಿದರೆ ಪಟ್ಟಣ ಪಟ್ಟಣ ಪಂಚಾಯತ್ ಎದುರು ಖಾಲಿ ಕೊಡ ಹಿಡಿದು ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಮಂಜಳಾ ಮುಕ್ಕಣ್ಣನವರ, ಮಲ್ಲಪ್ಪ ವಗ್ಗರ, ಪರಸಪ್ಪ ಬಕ್ಸದ, ಕವಿತಾ ಭಜಮ್ಮನವರ, ಭರಮಪ್ಪ ಕುದರಿ, ದುರಗಪ್ಪ ಮೊಡಿಕಾರ, ಮಂಜಪ್ಪ ಹುಲಕಟ್ಟಿ, ಇಸ್ಮಾಯಿಲಹಾಫೀಜ್, ಮಮತಾಜ ಬಡಿಗೇರ, ಗೌರಮ್ಮ ಸುಂಕದ, ಲಕ್ಷ್ಮೀ ಬಾರಕೇರ, ರವಿ ಗಂಟಿ, ನಿಂಗಪ್ಪ ಮನೆಗಾರ ಹಾಗೂ ಅನೇಕರು ಇದ್ದರು.

## ಕೃಷಿ ಅಂಕಿ ಅಂಶಗಳ ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯ ಸಭೆ

# ಕೃಷಿ ಅಂಕಿ-ಅಂಶಗಳ ನಿಖರತೆಗೆ ಇಲಾಖೆಗಳ ನಡುವೆ ಸಮನ್ವಯತೆ ಅತ್ಯಗತ್ಯ: ಜಿಲ್ಲಾಧಿಕಾರಿ ಸೂಚನೆ

ಗದಗ: ಜಿಲ್ಲೆಯಲ್ಲಿ ಕೃಷಿ, ತೋಟಗಾರಿಕೆ ಹಾಗೂ ರೇಷ್ಮೆ ಇಲಾಖೆಗಳಿಗೆ ಸಂಬಂಧಿಸಿದ ಕೃಷಿ ಅಂಕಿ-ಅಂಶಗಳು ಹಾಗೂ ಬೆಳೆ ವಿಸ್ತೀರ್ಣದ ಮಾಹಿತಿ ಅತ್ಯಂತ ನಿಖರವಾಗಿರಬೇಕು. ಇದಕ್ಕಾಗಿ ಕಂದಾಯ ಸೇರಿದಂತೆ ಎಲ್ಲಾ ಸಂಬಂಧಿತ ಇಲಾಖೆಗಳು ಪರಸ್ಪರ ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ (ಜೂನ್ 17) ರಂದು ಜರುಗಿದ ಕೃಷಿ ಅಂಕಿ ಅಂಶಗಳ ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಹಂಗಾಮು ಆರಂಭದಿಂದ ಕೊನೆಯವರೆಗೆ ಕೃಷಿ ಮತ್ತು ತೋಟಗಾ-ರಿಕೆ ಇಲಾಖೆಗಳ ಅಂಕಿ-ಅಂಶಗಳಲ್ಲಿ ಡೇಟಾ ಹೊಂದಾಣಿಕೆಯಲ್ಲಿ ಯಾವುದೇ ಗೊಂದಲಗಳಿರಬಾರದು. ಇಲಾಖೆಗಳು ಪರಸ್ಪರ ಕುಳಿತು ಮಾಹಿತಿಗಳನ್ನು ತಾಳೆ ನೋಡಬೇಕು ಹಾಗೆ ಕ್ಷೇತ್ರ ಮಟ್ಟದ ಬೆಳೆ ಸಮೀಕ್ಷೆ ನಿಖರವಾಗಿರಬೇಕು. ಖಾಸಗಿ ಜಂಟಿ ಸಮೀಕ್ಷೆದಾರರು (PR) ಮತ್ತು ಗ್ರಾಮ ಆಡಳಿತ ಅಧಿಕಾರಿಗಳು (VA) ನೀಡುವ ಬೆಳೆ ಸಮೀಕ್ಷೆಯ ಮಾಹಿತಿಯನ್ನು ಮೇಲ್ವಿಚಾರಕರು (Super-visors) ಕಡ್ಡಾಯವಾಗಿ ಕ್ಷೇತ್ರ ಮಟ್ಟದಲ್ಲಿ



ಪರಿಶೀಲಿಸಬೇಕು. ಇದು ಮೇಲ್ವಿಚಾರಕರ ಜವಾಬ್ದಾರಿ ಎಂದು ಸೂಚಿಸಿದರು.

ಕ್ರಾಪ್ ಕಟಿಂಗ್ ಪ್ರಯೋಗಗಳು ಮತ್ತು ಬೆಳೆ ಸಮೀಕ್ಷೆಗಳಲ್ಲಿ ತಪ್ಪು ಮಾಹಿತಿಗಳು ದಾಖಲಾದರೆ, ರೈತ-ರಿಗೆ ಬೆಳೆ ವಿಮೆ (Crop Insurance) ಪಡೆಯುವಾಗ ತೊಂದರೆಯಾಗುತ್ತದೆ. ರೈತರಿಗೆ ಅನ್ಯಾಯವಾಗದಂತೆ ಎಚ್ಚರಿಕೆಯಿಂದ ಕೆಲಸ ಮಾಡಬೇಕು ತಪ್ಪು ಮಾಹಿತಿಯಿಂದಾಗಿ ವಿಮಾ ಕಂಪನಿಗಳು ಆಕ್ಷೇಪಣೆ ಎತ್ತಲು ಅಧಿಕಾರಿಗಳೇ ಕಾರಣರಾಗಬಾರದು ಎಂದು ಎಚ್ಚರಿಸಿದರು. ಜಿಲ್ಲೆಯಲ್ಲಿ ಜೋಳದಂತಹ ಸಾಂಪ್ರದಾಯಿಕ ಬೆಳೆಗಳ ವಿಸ್ತೀರ್ಣ ಕಡಿಮೆಯಾಗುತ್ತಿರುವುದರ ಬಗ್ಗೆ ಕಳವಳ ವ್ಯಕ್ತಪಡಿಸಿದ ಜಿಲ್ಲಾಧಿಕಾ-ರಿಗಳು, ರೈತರಿಗೆ ಆರ್ಥಿಕವಾಗಿ ಹೆಚ್ಚಿನ ಲಾಭ ತಂದುಕೊಡುವ ಬೆಳೆಗಳ ಬಗ್ಗೆ ಬೆಳೆ ವೈವಿಧ್ಯತೆ ಹಾಗೂ ಪಾಳು ಭೂಮಿ ಬಳಕೆಯ ಮಾಹಿತಿ ನೀಡಬೇಕು ಎಂದರು.

ಜಿಲ್ಲೆಯಲ್ಲಿ ರೇಷ್ಮೆ ಕೃಷಿ ಮತ್ತು ತೋಟಗಾರಿಕಾ ಬೆಳೆಗಳಿಗೆ ಉತ್ತಮ ಅವಕಾಶಗಳಿದ್ದು, ರೈತರಿಗೆ ಮಿಶ್ರ ಬೆಳೆ ಪದ್ಧತಿ (Multi-cropping) ಅಳವಡಿಸಿಕೊಳ್ಳಲು ಪ್ರೋತ್ಸಾಹಿಸಬೇಕು. ಜಿಲ್ಲೆಯ ಪಾಳು ಭೂಮಿಯನ್ನು (Wasteland) ಗುರುತಿಸಿ, ಅದನ್ನು ಕೃಷಿ ಯೋಗ್ಯ ಭೂಮಿಯನ್ನಾಗಿ ಪರಿವರ್ತಿಸಿ ಸಮರ್ಪಕವಾಗಿ ಬಳಸಿಕೊಳ್ಳಲು ರೈತರಲ್ಲಿ ಜಾಗೃತಿ ಮೂಡಿಸುವಂತೆ ಕೃಷಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಬಿತ್ತನೆ ಕಾರ್ಯ ಮುಗಿದ ತಕ್ಷಣವೇ ಪೋರ್ಟಲ್‌ನಲ್ಲಿ ನಿಖರವಾದ ಮಾಹಿತಿಯನ್ನು ಅಪ್‌ಡೇಟ್ ಮಾಡಬೇಕು. ಯಾವುದೇ ಹಂತದಲ್ಲಿ ನಿರ್ಲಕ್ಷ್ಯ ವಹಿಸುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದರು, ಕೃಷಿ ವಲಯದ ಪ್ರಗತಿ ಹಾಗೂ ನಿಖರವಾದ ಅಂಕಿ-ಅಂಶಗಳ ಸಂಗ್ರಹಣೆಯು ಸರ್ಕಾರದ ಯೋಜನೆಗಳನ್ನು ರೈತರಿಗೆ ತಲುಪಿಸಲು ಅತ್ಯಂತ ಪ್ರಮುಖವಾಗಿದೆ ಎಂದು ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ ತಿಳಿಸಿದರು.

ಬೆಳೆ ವಿಮೆ ಹಾಗೂ ಪರಿಹಾರ ವಿತರಣೆಯಲ್ಲಿ ಯಾವುದೇ ಲೋಪವಾಗದಂತೆ ತಡೆಯಲು ಜಿಪಿಎಸ್ ಆಧಾರಿತ ನಿಖರ ಅಂಕಿ-ಅಂಶಗಳ ಸಂಗ್ರಹಣೆ ಮತ್ತು ನಿಖರ ಬೆಳೆ ಸಮೀಕ್ಷೆ ನಡೆಸಬೇಕು. ಕೃಷಿ ಮತ್ತು ಸಾಂಖ್ಯಿಕ ಇಲಾಖೆಯ ಅಧಿಕಾರಿಗಳು ಜಂಟಿಯಾಗಿ ಸಮನ್ವಯತೆಯಿಂದ ಕಾರ್ಯನಿರ್ವಹಿಸಿ, ನಿಗದಿತ ಅವಧಿಯೊಳಗೆ ಬೆಳೆ ಕಟಾವು ಪ್ರಯೋಗಗಳನ್ನು ಯಶಸ್ವಿಗೊಳಿಸಬೇಕು. ?ಜಿಲ್ಲೆಯಲ್ಲಿ ರೈತರ ಸಂಖ್ಯೆ ಹಾಗೂ ಭೂಹಿಡುವಳಿ ವಿಸ್ತೀರ್ಣಕ್ಕೆ ಸಂಬಂಧಿಸಿದ ದತ್ತಾಂಶಗಳನ್ನು ನಿರಂತರವಾಗಿ ರೈತರ ಮಾಹಿತಿ ನವೀಕರಿಸಲು ಅಧಿಕಾರಿಗಳು ಕ್ಷೇತ್ರ ಮಟ್ಟದಲ್ಲಿ ಭೇಟಿ ನೀಡಿ ವಾಸ್ತವಿಕ ವರದಿಯನ್ನು ಸಿದ್ಧಪಡಿಸಬೇಕು. ತಪ್ಪು ಮಾಹಿತಿಯಿಂದ ಯಾವುದೇ ಅರ್ಹ ರೈತರು ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಬಾರದು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸೂಚಿಸಿದರು. ಸಭೆಯಲ್ಲಿ ಮಾತನಾಡಿದ ಜಿಲ್ಲಾ ಸಾಂಖ್ಯಿಕ ಸಂಗ್ರಹಣಾ ಅಧಿಕಾರಿಗಳಾದ ಬಿ.ಎಸ್. ಪಾಟೀಲ ಅವರು ಜಿಲ್ಲೆಯ ಕೃಷಿ ಅಂಕಿ-ಅಂಶಗಳ ಪ್ರಗತಿ ಹಾಗೂ ಪ್ರಸಕ್ತ ಸಾಲಿನ ಗುರಿಗಳ ಕುರಿತು ಸಭೆಗೆ ಸಮಗ್ರ ಮಾಹಿತಿ ನೀಡಿದರು.

ಗದಗ ಜಿಲ್ಲೆಯ ಕೃಷಿ, ತೋಟಗಾರಿಕೆ ಹಾಗೂ ರೇಷ್ಮೆ ಇಲಾಖೆಗಳ ಸಮನ್ವಯದೊಂದಿಗೆ ಕಳೆದ ಮೂರು ವರ್ಷಗಳ (2023-24 ರಿಂದ 2025-26) ಋತುಮಾನವಾರು ಒಟ್ಟು ಮತ್ತು ನೀರಾವರಿ ಬೆಳೆ ಕ್ಷೇತ್ರಗಳ ಹಾಗೂ ಪ್ರಮುಖ ಬೆಳೆಗಳ ವಿಸ್ತೀರ್ಣದ ಅಧಿಕೃತ ಅಂಕಿ-ಅಂಶಗಳ ವರದಿಯನ್ನು ಬಿಡುಗಡೆ ಮಾಡಲಾಗಿದೆ.


4ನೇ ಪುಟಕ್ಕೆ....


## ಶಿಕ್ಷಕರು ಕೇವಲ ಅಕ್ಷರ ಕಲಿಸಲ್ಲ, ಬದುಕು-ಭವಿಷ್ಯ ಕಟ್ಟುತ್ತಾರೆ : ಫಕೀರ ದಿಂಗಾಲೇಶ್ವರ ಶ್ರೀ

ಲಕ್ಷ್ಮೇಶ್ವರ: ಶಿಕ್ಷಕರು ಕೇವಲ ಅಕ್ಷರ ಕಲಿಸುವುದಕ್ಕಷ್ಟೇ ಅಲ್ಲದೇ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಶ್ರೇಷ್ಠ ಶಿಲ್ಪಿಯಾಗಿದ್ದಾರೆ ಎಂದು ಶಿರಹಟ್ಟಿ ಫಕ್ಕೀರೇಶ್ವರ ಸಂಸ್ಥಾನಮಠದ ಉತ್ತರಾಧಿಕಾರಿ ಶ್ರೀ ಫಕೀರ ದಿಂಗಾಲೇಶ್ವರ ಮಹಾಸ್ವಾಮಿಗಳು ನುಡಿದರು.

ಅವರು ರವಿವಾರ ಪಟ್ಟಣದ ಶ್ರೀ ಶಂಕರ ಭಾರತಿ ಕಲ್ಯಾಣ ಮಂಟಪದಲ್ಲಿ ನಿವೃತ್ತಿ ಮುಖ್ಯೋಪಾಧ್ಯಾಯಿನಿ ವರಮಹಾಲಕ್ಷ್ಮೀ ಪೂಜಾರ ಅವರ ಕುಟುಂಬದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಕೃತಜ್ಞತಾ ಸಮರ್ಪಣೆ ಕಾರ್ಯಕ್ರಮ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಭಾರತೀಯ ಸಂಸ್ಕೃತಿಯಲ್ಲಿ ಗುರುವಿಗೆ ದೇವರ ಸ್ಥಾನ ನೀಡಲಾಗಿದೆ. ಅಕ್ಷರ ಜ್ಞಾನದ ಜೊತೆಗೆ ಉತ್ತಮ ಸಂಸ್ಕಾರ, ನೈತಿಕ ಮೌಲ್ಯಗಳನ್ನು ಕಲಿಸಿಕೊಡುವುದು ನಿಜವಾದ ಶಿಕ್ಷಣ. ಈ ನಿಟ್ಟಿನಲ್ಲಿ ವರಮಹಾಲಕ್ಷ್ಮೀ ಪೂಜಾರ 32 ವರ್ಷಗಳ ಕಾಲ ಸುದೀರ್ಘ ಸೇವಾವಧಿಯಲ್ಲಿ ಸಾವಿರಾರು ವಿದ್ಯಾರ್ಥಿಗಳ ಬಾಳನ್ನು ಬೆಳಗಿದ್ದಾರೆ. ಅವರ ತಾಳ್ಮೆ, ಪ್ರೀತಿ ಮತ್ತು ಬೋಧನಾ ಶೈಲಿ ಪ್ರತಿಯೊಬ್ಬರಿಗೂ ಮಾದರಿಯಾಗಿದೆ, ತಮ್ಮ ಈ ನಿವೃತ್ತಿಯ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ನಿವೃತ್ತ ನೌಕರರನ್ನು ಸನ್ಮಾನಿಸುವ ಮೂಲಕ ಮಾದರಿ ಕಾರ್ಯಕ್ರಮ ಮಾಡಿದ್ದಾರೆ.



ನಿವೃತ್ತಿಯು ಕೆಲಸದ ಅಂತ್ಯವಲ್ಲ, ಬದಲಿಗೆ ಸಮಾಜ ಸೇವೆಗೆ ಮತ್ತು ಜ್ಞಾನ ಹಂಚಿಕೆಗೆ ಸಿಕ್ಕ ಮತ್ತೊಂದು ಅವಕಾಶ ಎಂದು ತಿಳಿದು ಅವರ ಕೊಡುಗೆ ಸಮಾಜಕ್ಕೆ ಇನ್ನೂ ಹೆಚ್ಚು ದೊರಕಲಿ ಎಂದು ಹಾರೈಸಿದರು. ಕಾರ್ಯಕ್ರಮ ಉದ್ಘಾಟಿಸಿದ ಡಿಡಿಪಿಐ ಆರ್.ಎಸ್.ಬುರಡಿ ಅವರು ಶಿಕ್ಷಕ ವೃತ್ತಿ ಮಾಡುವುದು ಭಾಗ್ಯವಂತರ ಕೆಲಸವಾಗಿದ್ದು, ಶಿಕ್ಷಕ ಸೇವೆ ಶ್ರೇಷ್ಠ ಸೇವೆಯಾಗಿದೆ, ಶಿಕ್ಷಕರಾದವರು ಎಲ್ಲ ಸಮುದಾಯದವರು ಎಲ್ಲ ಕ್ಷೇತ್ರಗಳನ್ನು ಬೆಳೆಸುವಂತಹ ವಿಶೇಷ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಇದೊಂದು ಸಾಮಾಜಿಕ ಬದಲಾವಣೆ ತರುವಂತಹ ಹುದ್ದೆಯಾಗಿದೆ. ಈ ಸೇವೆ ಸಿಗುವುದು ತುಂಬಾ ಭಾಗ್ಯವಾಗಿದ್ದು, ಈ ದಿಸೆಯಲ್ಲಿ ಶಿಕ್ಷಕಿಯಾಗಿ ವಿ.ಕೆ.ಪೂಜಾರ ಅವರು ಮಕ್ಕಳನ್ನು ತಮ್ಮ ಸ್ವಂತ ಮಕ್ಕಳಂತೆ ಪ್ರೀತಿಸಿ, ಅವರನ್ನು ಸತ್ಪ್ರಜೆಗಳಾಗಿ ರೂಪಿಸುವಲ್ಲಿ ಅವರ ಶ್ರಮ ದೊಡ್ಡದು. ತಮ್ಮ ವೈಯಕ್ತಿಕ ಬದುಕಿನ ಕಷ್ಟಗಳನ್ನು ಬದಿಗಿಟ್ಟು, ವಿದ್ಯಾರ್ಥಿಗಳ ಉಜ್ವಲ ಭವಿಷ್ಯವನ್ನು ರೂಪಿಸಿದ ಅವರು ಕೊಡುಗೆಯನ್ನು ಸಮಾಜ ಸದಾ ಸ್ಮರಿಸುತ್ತದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗೋಪಾಲ ಪಡ್ನೀಸ್ ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಆರ್.ಬಿ.ಜೋಶಿ, ಗುರುರಾಜ ಹವಳದ, ರುಕ್ಮೀಣಿಬಾಯಿ ಪೂಜಾರ, ಆರ್.ಡಿ.ಭರಮಗೌಡ್ರ, ಎಸ್.ಜಿ.ಹೊಂಬಳ, ಬಿ.ಎಸ್.ಹರ್ಲಾಪೂರ, ನಾಗರಾಜ ಪೂಜಾರ, ಸಿ.ಕೆ.ಪೂಜಾರ, ನಾರಾಯಣ ಪೂಜಾರ, ಜಯಂತ ದೇಶಪಾಂಡೆ, ಶ್ರೀಕಾಂತ ಪೂಜಾರ, ಅಶೋಕ ಪೂಜಾರ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು. ನಾಗರಾಜ ಶಿಗ್ಲಿ, ರಾಜೇಶ್ವರಿ ಅಡರಕಟ್ಟಿ ನಿರೂಪಿಸಿದರು.

## ಜೂನ್ 20ಕ್ಕೆ ಸ್ಲಂ ಜನಾಂದೋಲನ ಕರ್ನಾಟಕ ರಾಜ್ಯ ಪ್ರತಿನಿಧಿಗಳ ಸಮ್ಮೇಳನ

ಗದಗ: ಸ್ಲಂ ಜನಾಂದೋಲನ ಕರ್ನಾಟಕ ರಾಜ್ಯ ಪ್ರತಿನಿಧಿಗಳ ಸಮ್ಮೇಳನವು ಜೂನ್ 20 ರಂದು ಬೆಳಿಗ್ಗೆ 10-30 ಕ್ಕೆ ನಗರದ ಲಯನ್ಸ್ ಭವನ ನಡೆಯಲಿದ್ದು, ಕಾರ್ಯಕ್ರಮದ ಉದ್ಘಾಟನೆಯನ್ನು ಪರಮ ಪೂಜ್ಯ ಡಾ. ಪ್ರಭು ಮಹಾಂತ ಮಹಾ ಸ್ವಾಮೀಜಿಗಳು, ಗುರು ಬಸವೇಶ್ವರ ಮಠ, ಬೇಲೂರು ನಡೆಸಲಿದ್ದಾರೆ ಎಂದು ಸ್ಲಂ ಜನಾಂದೋಲನ ಸಮಿತಿಯ ಜಿಲ್ಲಾಧ್ಯಕ್ಷ ಇಮ್ತಿಯಾಜ್ ಆರ್. ಮಾನ್ವಿ ಹೇಳಿದರು.

ಇಲ್ಲಿನ ಪತ್ರಿಕಾ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಂದ್ರಮ್ಮ, ರಾಜ್ಯ ಸಂಚಾಲಕರು, ಮಾತೆ ಸಾವಿತ್ರಿಬಾ ಫುಲೆ ಮಹಿಳಾ ಸಮಿತಿ, ಬೆಂಗಳೂರು ವಹಿಸಿಕೊಳ್ಳಲಿದ್ದು, ಕಾರ್ಯಕ್ರಮ ಉದ್ದೇಶಿಸಿ ಪ್ರಾಸ್ತಾವಿಕವಾಗಿ ರಾಜ್ಯ ಸಂಚಾಲಕ ಎ. ನರಸಿಂಹಮೂರ್ತಿ ಮಾತನಾಡಲಿದ್ದಾರೆ ಎಂದರು.

ಹೋರಾಟ ಕುರಿತು ಸಾಹಿತಿ ಬಸವರಾಜ ಸುಳಿಬಾವಿ ಮಾತನಾಡಲಿದ್ದು, ಸಮ್ಮೇಳನದ ರ್ಯಾಲಿ ಉದ್ಘಾಟನೆಯನ್ನು ಸಾಮಾಜಿಕ ಹೋರಾಟಗಾರ ಚೇತನ ಅಹಿಂಸಾ ನಡೆಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪೂರ್ಣ ರವಿಶಂಕರ ಹೈಕೋರ್ಟ್ ನ್ಯಾಯವಾದಿಗಳು, ಬೆಂಗಳೂರು, ಎಂ.



ಎಸ್.ಹಡಪದ, ನ್ಯಾಯವಾದಿಗಳು ಮತ್ತು ಪ್ರಗತಿಪರ ಹೋರಾಟಗಾರರು, ಗಜೇಂದ್ರಗಡ, ವೆಂಕಟೇಶಯ್ಯ ಜಿಲ್ಲಾ ಸಂಚಾಲಕರು, ಡಿ.ಎಸ್.ಎಸ್. ಗದಗ, ಸತೀಶ ಪಾಸಿ ಪ್ರಗತಿಪರ ಚಿಂತಕರು, ಗದಗ ಭಾಗವಹಿಸಲಿದ್ದಾರೆ ಎಂದರು.

ರಾಜ್ಯ ಸಂಚಾಲಕ ಎ. ನರಸಿಂಹಮೂರ್ತಿ ಮಾತನಾಡಿ, ರಾಜ್ಯ ಸರ್ಕಾರ ಮೂರು ವರ್ಷ ಪೂರೈಸಿದರೂ ಸ್ಲಂ ಜನರ ಬೇಡಿಕೆ ಈಡೇರಿಸಿಲ್ಲ. ಸ್ಲಂ ಜನರಿಗೆ ಉಚಿತ ಮನೆ ನೀಡುತ್ತೇವೆ ಎಂದು ಈಗಿರುವ ಕಾಂಗ್ರೆಸ್ ಸರ್ಕಾರ ಚುನಾವಣೆ ಪೂರ್ವದಲ್ಲಿ ಹೇಳಿಕೆ ನೀಡಿತ್ತು. ಆದರೆ, ಮಾತು ತಪ್ಪಿ ಸ್ಲಂ ಜನರಿಗೆ ಅನ್ಯಾಯ ಮಾಡಲಾಗುತ್ತಿದೆ. ಪಂಚ ಗ್ಯಾರಂಟಿ ಜೊತೆಗೆ ಹಲವಾರು ಭರವಸೆಯನ್ನು ಕಾಂಗ್ರೆಸ್ ನೀಡಿತ್ತು. ಆದ-ರೆ, ಇನ್ನೂಳಿದ ಭರವಸೆಯನ್ನು ಈಡೆರಿಸುವ ಪ್ರಯತ್ನವನ್ನು ಸರ್ಕಾರ ಮಾಡುತ್ತಿಲ್ಲ ಎಂದು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಪರಿಶೀಲನೆ ನೆಪದಲ್ಲಿ ಗೃಹಲಕ್ಷ್ಮೀ ಯೋಜನೆ ಸ್ಥಗಿತಗೋಳಿಸುವ ಹುನ್ನಾರವನ್ನು ಸರ್ಕಾರ ಮಾಡುತ್ತಿದೆ. ಮುಂಬರುವ ದಿನಗಳಲ್ಲಿ ಗೃಹಜ್ಯೋತಿ ಯೋಜನೆಯನ್ನು ನಿಲ್ಲಿಸುವ ವ್ಯವಸ್ಥಿತ ಪಿತೂರಿ ನಡೆಯುತ್ತಿದೆ. ಈ ಕುರಿತು ಸರ್ಕಾರದ ಕಣ್ತೆರೆಸುವ ಕಾರ್ಯವನ್ನು ಸ್ಲಂ ಜನಾಂದೋಲನ ಕರ್ನಾಟಕ ರಾಜ್ಯ ಪ್ರತಿನಿಧಿಗಳ ಸಮ್ಮೇಳನ ಮಾಡುತ್ತಿದೆ ಎಂದರು.

ಈ ವೇಳೆ ವಿಶಾಲಾಕ್ಷಿ ಹಿರೇಗೌಡ್ರ, ವೆಂಕಮ್ಮ ಹೊಸಪೇಟೆ, ವೆಂಗಮ್ಮ ದೊಡ್ಡಮನಿ, ಆರಾಧನಾ ಬಣಕಾರ, ಫರ್ಮಿನಬಾನು ಹವಾಲ್ದಾರ, ಮೆಹಬೂಬಸಾಬ್ ಬಳ್ಳಾರಿ, ಫಕ್ರುಸಾಬ್ ಮುಲ್ಲಾನವರ, ಶರಣಪ್ಪ ಸೂಡಿ, ಇಮ್ರಾಹಿಂ ಮುಲ್ಲಾ, ಅಕ್ಬರಬಾಷಾ ಡಂಬಳ, ಮೌಲಾಸಾಬ್ ಗಚ್ಚಿ, ಮಹಮ್ಮದ್ ಗಡಾದ ಉಪಸ್ಥಿತರಿದ್ದರು.

## ನರಗುಂದ ಕಾರ್ಮಿಕ ಸಮುದಾಯ ಭವನಕ್ಕೆ ಬಾಡಿಗೆ ದರ ನಿಗದಿ

ಗದಗ: ಗದಗ ಜಿಲ್ಲೆ ನರಗುಂದ ಪಟ್ಟಣದಲ್ಲಿ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ವತಿಯಿಂದ ನಿರ್ಮಿಸಲಾಗಿರುವ ಕಾರ್ಮಿಕ ಸಮುದಾಯ ಭವನಕ್ಕೆ ಕಾರ್ಮಿಕ ಸಚಿವರು ಹಾಗೂ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ಅಧ್ಯಕ್ಷರು ಅನುಮೋದನೆ ನೀಡಿರುವಂತೆ ಈ ಕೆಳಗಿನಂತೆ ಬಾಡಿಗೆ ದರ ನಿಗದಿಪಡಿಸಲಾಗಿದೆ.

ಸರಕು ಮತ್ತು ಸೇವಾ ತೆರಿಗೆ , ವಿದ್ಯುತ್ ಮತ್ತು ನೀರಿನ ಶುಲ್ಕ ಸೇರಿದಂತೆ ಒಟ್ಟು ಬಾಡಿಗೆ ದರವು ಮಂಡಳಿಗೆ ವಂತಿಗೆ ಪಾವತಿಸಿರುವ ಸಂಘಟಿತ ಕಾರ್ಮಿಕರಿಗೆ 15,440 ರೂ, ಸಾರ್ವಜನಿಕರಿಗೆ 20,160 / ರೂ , ಸರ್ಕಾರದ ವಿವಿಧ ಇಲಾಖೆಗಳು ನೀಡುವ ತರಬೇತಿ ಹಾಗೂ ಇಲಾಖಾ ಕಾರ್ಯಕ್ರಮಗಳಿಗೆ 15,440/- ರೂ. ನಿಗದಿಪಡಿಸಲಾಗಿದೆ. ಭದ್ರತಾ ಠೇವಣಿ ರೂ.2,000/- ನಿಗದಿಪಡಿಸಲಾಗಿದೆ. ಸಮುದಾಯ ಭವನವನ್ನು ಬಾಡಿಗೆ ಪಡೆಯುವ ಮಂಡಳಿಗೆ ವಂತಿಗೆ ಪಾವತಿಸಿರುವ ಸಂಘಟಿತ ಕಾರ್ಮಿಕರು ಕಡ್ಡಾಯವಾಗಿ ವಾರ್ಷಿಕವಾಗಿ ಅನ್ವಯವಾಗುವ ವಂತಿಗೆ ಪಾವತಿಸಿರುವ ವಿವರವನ್ನು ನೀಡಿದಲ್ಲಿ ರಿಯಾಯತಿ ದರದಲ್ಲಿ ಬಾಡಿಗೆಗೆ ನೀಡಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕಾರ್ಮಿಕ ನಿರೀಕ್ಷಕರ ಕಚೇರಿ, ನರಗುಂದ ತಾಲೂಕು, ನರಗುಂದ ಮಿನಿ ವಿಧಾನ ಸೌಧ, ಹುಬ್ಬಳ್ಳಿ ರಸ್ತೆ , ನರಗುಂದ- 582 207 ಸಂಪರ್ಕಿಸಬಹುದಾಗಿದೆ.

## ದೇಶದಲ್ಲಿನ ಬಡತನ, ಭದ್ರತೆಯ ಚರ್ಚೆ ಬದಲು ಎಸ್.ಐ.ಆರ್ ಚರ್ಚೆ : ಯೂಸೂಫ್ ಕುನ್ನಿ

ಗದಗ: ಸದ್ಯ ರಾಷ್ಟ್ರ ಮಟ್ಟದಲ್ಲಿ ಚರ್ಚೆ ಆಗಬೇಕಾದ ವಿಷಯ ಆಗುತ್ತಿಲ್ಲ. ದೇಶದಲ್ಲಿರುವ ಬಡತನ, ಭದ್ರತೆ ಸೇರಿದಂತೆ ಹಲವಾರು ವಿಷಯಗಳ ಬಗ್ಗೆ ಚರ್ಚೆ ಮಾಡಬೇಕಿದೆ. ಆದರೆ, ಎಸ್.ಐ.ಆರ್ ಕುರಿತು ಚರ್ಚೆ ಆಗುತ್ತಿದೆ ಎಂದು ಜಮಾತೆ ಇಸ್ಲಾಮೆ ಹಿಂದ್ ಕರ್ನಾಟಕ ರಾಜ್ಯ ಕಾರ್ಯದರ್ಶಿ ಯೂಸೂಫ್ ಕುನ್ನಿ ಹೇಳಿದರು.

ಇಲ್ಲಿನ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಸ್ವಾತಂತ್ರ್ಯ ಪೂರ್ವದಲ್ಲಿ ಹೆಚ್ಚು ಜನ ಶ್ರೀಮಂತರು, ರಾಜ-ಕೀಯ ಪ್ರಭಾವಿಗಳು ಮಾತ್ರ ಮತ ಹಾಕುತ್ತಿದ್ದರು. ಸ್ವಾತಂತ್ರ್ಯದ ನಂತರ 1955 ರಲ್ಲಿ ಮೊದಲ ಬಾರಿ 17 ಕೋಟಿ 32 ಲಕ್ಷ ಜನರಿಗೆ ಮತದಾನದ ಹಕ್ಕು ನೀಡಲಾಗಿತ್ತು. 2024 ರ ಚುನಾವಣೆಯಲ್ಲಿ 100 ಕೋಟಿ ಜನರು ಮತದಾನ ಮಾಡುವ ಹಕ್ಕು ಪಡೆದಿದ್ದಾರೆ ಎಂದು ಮಾಹಿತಿ ನೀಡಿದರು.

ನುಸುಳುಕೋರರನ್ನು ಹೊರದಬ್ಬುವ ಜವಾಬ್ದಾರಿ ಕೇಂದ್ರ ಸರ್ಕಾರದ್ದು. ಎನ್.ಡಿ.ಎ ಸರ್ಕಾರ ಅಧಿಕಾರಕ್ಕೆ ಬಂದು 12 ವರ್ಷ ಕಳೆದಿದೆ. ಈ ಅವಧಿಯಲ್ಲಿ ಬೇರೆ-ಬೇರೆ ದೇಶಗಳಿಂದ ಭಾರತಕ್ಕೆ ಬಂದಿರುವ ವಿದೇಶಿಗರ ಪಟ್ಟಿಯನ್ನು



ಕೇಂದ್ರ ನೀಡಬೇಕಿದೆ. ಆದರೆ, ಅದು ಆಗುತ್ತಿಲ್ಲ ಎಂದು ವಾಗ್ದಾಳಿ ನಡೆಸಿದರು.

ದೇಶದ 13 ರಾಜ್ಯಗಳಲ್ಲಿ ನಡೆದ ಎಸ್.ಐ.ಆರ್ ನಲ್ಲಿ ಒಟ್ಟು 6 ಕೋಟಿಗೂ ಅಧಿಕ ಮತದಾರರನ್ನು ಪಟ್ಟಿಯಿಂದ ತಗೆದು ಹಾಕಲಾಗಿದೆ. ಆದರೆ, ಎಷ್ಟು ನುಸುಳುಕೋರರನ್ನು ಮತದಾರರ ಪಟ್ಟಿಯಿಂದ ತಗೆದು ಹಾಕಲಾಗಿದೆ ಎಂದು ಚುನಾವಣಾ ಆಯೋಗ ದೇಶದ ಜನರ ಮುಂದೆ ಹೇಳಬೇಕು ಎಂದು ಆಗ್ರಹಿಸಿದರು. ದೇಶಾದ್ಯಂತ 6 ಕೋಟಿ 10 ಲಕ್ಷ ಕ್ಕೂ ಜನರನ್ನು ಮತದಾರರ ಪಟ್ಟಿಯಿಂದ ತಗೆದು ಹಾಕಲಾಗಿದೆ. ಆ ಪೈಕಿ 5 ಕೋಟಿಗೂ ಹೆಚ್ಚು ದಲಿತರು, ಬಡವರನ್ನು ಪಟ್ಟಿಯಿಂದ ತಗೆದು ಹಾಕಲಾಗಿದೆ. ಈ ಮೂಲಕ ಚುನಾವಣಾ ಆಯೋಗ ದೇಶದ ಮತದಾರ-ರಿಗೆ ಅನ್ಯಾಯ ಮಾಡುತ್ತಿದೆ. ಇದರ ವಿರುದ್ಧವಾಗಿ ಈಗಾಗಲೇ ರಾಷ್ಟ್ರಾದ್ಯಂತ ಹೋರಾಟ ನಡೆಯುತ್ತಿದೆ. ಕರ್ನಾಟಕದಲ್ಲಿಯೂ ಉಗ್ರ ಹೋರಾಟ ಮಾಡುತ್ತಿವೆ ಎಂದರು.

ಯುವ ಮುಖಂಡ ಸರೋವರ ಬೆಂಕಿಕೇರಿ ಮಾತನಾಡಿ, ಭಾರತ ಚುನಾವಣಾ ಆಯೋಗದಿಂದ ಕಾಲ-ಕಾಲಕ್ಕೆ ಮತದಾರರ ಪಟ್ಟಿ ಪರಿಷ್ಕರಣೆ ಮಾಡಲಾಗುತ್ತದೆ. ಇದು ಸ್ವಾಗತಾರ್ಹ. ಆದರೆ, ಇತ್ತಿಚೆಗೆ ಚುನಾವಣಾ ಆಯೋಗ ಎಸ್.ಐ.ಆರ್ ಜಾರಿಗೆ ತಂದು ದೇಶದಲ್ಲಿ ಗೊಂದಲ ಮೂಡಿಸುವ ಕೆಲಸ ಮಾಡುತ್ತಿದೆ ಎಂದರು. ಈ ವೇಳೆ ಹೀಸಾಬೆಲ್ಲಾ, ಬಿಲಾಲ್ ಗೋಕಾವಿ, ಜುನ್ನೈದ್ ಉಮಚಗಿ, ಆರಾಧನಾ ಬಣಕಾರ, ಆರೀಫ್ ಉಲ್ಲಾ, ಮುತ್ತು ಬಿಳೆಯಲಿ, ಅನ್ವರ್ ಬಾಗೆವಾಡಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

**ಹಕ್ಕೋತ್ತಾಯ**

1. ಅತಾರ್ಕಿಕವಾದ 'ಲಾಜಿಕಲ್ ಡಿಸ್ಕ್ರಿಪೆನ್ಸಿ' ಸಾಫ್ಟ್‌ವೇರ್ ಅನ್ನು ಕರ್ನಾಟಕದಲ್ಲಿ ಬಳಸಬಾರದು.
2. ನೀವು ತಯಾರಿಸುವ ಮತದಾರರ ಪಟ್ಟಿಯ ಕರಡು ಪ್ರತಿಯನ್ನು [ಪರಿಶೀಲನೆಗೆ ಅವಕಾಶವಿರುವಂತೆ] ಕಂಪ್ಯೂಟರ್ ಮಾದರಿಯಲ್ಲಿ ಕೊಡಬೇಕು.
3. ಚುನಾವಣಾ ಮ್ಯಾನ್ಯುವಲ್ ನಲ್ಲಿ ನೀಡಲಾಗಿರುವ ನಿರ್ದೇಶನದಂತೆ, ಕರಡು ಮತದಾರರ ಪಟ್ಟಿಯನ್ನು ಗ್ರಾಮ ಸಭೆ ಹಾಗೂ ವಾರ್ಡ್ ಸಭೆಗಳನ್ನು ಕರೆದು ಸಾರ್ವಜನಿಕ ಪರಿಶೀಲನೆ ಮತ್ತು ತಿದ್ದುಪಡಿಗೆ ಒಳಪಡಿಸಬೇಕು.
4. ಅಪೀಲ್ ಸಲ್ಲಿಸಲು ಕನಿಷ್ಟ 6 ತಿಂಗಳ ಸಮಯವಕಾಶವಿರಬೇಕು.

## ಕಸದ ರಾಶಿಯಲ್ಲಿ 59 ಜೀವಂತ ಗುಂಡುಗಳು ಪತ್ತೆ : ಆತಂಕದಲ್ಲಿ ಬೆಳಗಾವಿ ಜನ

ಬೆಂಗಳೂರು: ಬೆಳಗಾವಿ ನಗರದ ಕೈಗಾರಿಕಾ ಪ್ರದೇಶವಾದ ಉದ್ಯಮ ಭಾಗದಲ್ಲಿ 59 ಜೀವಂತ ಗುಂಡುಗಳು ಕಸದ ರಾಶಿಯಲ್ಲಿ ಪತ್ತೆಯಾಗಿರುವುದು ಆತಂಕಕ್ಕೀಡು ಮಾಡಿದೆ.
ಮಹಾನಗರ ಪಾಲಿಕೆಯ ಪೌರ ಕಾರ್ಮಿಕರು ಎಂದಿನಂತೆ ಕಸ ವಿಂಗಡಣೆ ಮಾಡುತ್ತಿದ್ದ ವೇಳೆ ಕಸದ ರಾಶಿಯಲ್ಲಿ ಗುಂಡುಗಳನ್ನು ಕಂಡು ಒಂದು ಕ್ಷಣ ಗಾಬರಿಯಾಗಿದ್ದಾರೆ.



ಪೌರಕಾರ್ಮಿಕರು ಈ ಗುಂಡುಗಳನ್ನು ಗಮನಿಸಿ ತಕ್ಷಣ ಉದ್ಯಮಭಾಗ ಪೊಲೀಸ್ ಠಾಣೆಗೆ ವಿಷಯ ತಿಳಿಸಿದ್ದಾರೆ.ಸುದ್ದಿ ತಿಳಿದು ಪೊಲೀಸ್ ನೀರಿಕ್ಷಕ ಮಹಾಂತೇಶ ಹೊಸಪೇಟೆ ಮತ್ತು ಸಿಬ್ಬಂದಿ ತಂಡ ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದೆ. ಪಿಎಸ್ಐ ಪ್ರವೀಣ ಬಿರಾದಾರ್ ನೇತೃತ್ವದಲ್ಲಿ ಸ್ಥಳ ಮಹಜರು ನಡೆಸಲಾಗಿದ್ದು, ಈ ಬಗ್ಗೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸ್ಥಳದಲ್ಲಿ ಪತ್ತೆಯಾದ 59 ಗುಂಡುಗಳ ಪೈಕಿ 41 ಗುಂಡುಗಳು ಒಂದೇ ಮಾದರಿಯಾಗಿದ್ದರೇ ಉಳಿದ 18 ಗುಂಡುಗಳು ಮತ್ತೊಂದು ಮಾದರಿಯದ್ದಾಗಿವೆ. ಈ ಗುಂಡುಗಳ ಪೈಕಿ ಕೆಲವು ಹಾಳಾಗಿರುವುದು ಕಂಡು ಬಂದಿದೆ. ಎಲ್ಲಾ ಗುಂಡುಗಳನ್ನು ವಶಕ್ಕೆ ಪಡೆದಿರುವ ಪೊಲೀಸರು ಅವುಗಳನ್ನು ಎಫ್ಎಸ್ಎಲ್‌ಗೆ ಹಾಗೂ ಬ್ಯಾಲಿಸ್ಟಿಕ್ ಪರೀಕ್ಷೆಗೆ ಕಳುಹಿಸಿದ್ದಾರೆ. ಈ ಗುಂಡುಗಳ ಮೂಲ,ಎಲ್ಲಿ ಇವುಗಳನ್ನು ತಯಾರಿಸಲಾಗಿದೆ, ಯಾತಕ್ಕಾಗಿ ಈ ಸ್ಥಳದಲ್ಲಿ ತಂದು ಬಿಸಾಡಲಾಗಿದೆ, ಯಾವುದಾದರೂ ಸಂಭವನೀಯ ಬಳಕೆಗೆ ತಂದು ನಂತರ ಸಾಧ್ಯವಾಗದಿದ್ದಾಗ ಕಸದ ರಾಶಿಗೆ ಬಿಸಾಡಿ ಹೋಗಿರಬಹುದೇ ಎಂಬಿತ್ಯಾದಿ ಮಾಹಿತಿಗಳನ್ನು ಪೊಲೀಸರು ಕಲೆಹಾಕುತ್ತಿದ್ದಾರೆ.

## ಮೋದಿ-ಮೆಲೋನಿ ಫೇಮಸ್ ಕಪಲ್ ಅಂತೆ..!



ಪ್ಯಾರಿಸ್: ಮೋದಿ ಮತ್ತು ನಾನು ಫೇಮಸ್ ಕಪಲ್ ಇದ್ದ ಹಾಗೇ ಎಂದು ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಹಾಸ್ಯ ಚಟಾಕಿ ಹಾರಿಸಿದ್ದಾರೆ.ಕೆಲ ದಿನಗಳ ಹಿಂದೆ ಇಟಲಿ ಪ್ರವಾಸಕ್ಕೆ ತೆರಳಿದ್ದ ಮೋದಿ ಅವರು ಅಲ್ಲಿನ ಪ್ರಧಾನಿ ಜಾರ್ಜಿಯಾ ಮೆಲೋನಿ ಅವರಿಗೆ ಮೆಲೋಡಿ ಚಾಕೊಲೇಟ್ ಗಿಫ್ಟ್ ಕೊಟ್ಟಿದ್ದರು.

ಈ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ಭಾರೀ ಸದ್ದು ಮಾಡಿತ್ತು. ಇದೀಗ ಜಿ7 ಶೃಂಗದಲ್ಲಿ ಮತ್ತೆ ಈ ಇಬ್ಬರು ಜಾಗತಿಕ ನಾಯಕರು ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡಿದ್ದಾರೆ. ಫ್ರಾನ್?ಸನ ಏವಿಯನ್-ಲೆ-ಬೈನ್ಸ್ ನಲ್ಲಿ ನಡೆಯುತ್ತಿರುವ ಜಿ7 ಶೃಂಗಸಭೆಯಲ್ಲಿ ಪ್ರಧಾನಿ ಮೋದಿ ಹಾಗೂ ಜಾರ್ಜಿಯಾ ಮೆಲೋನಿ ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ಇದೇ ವೇಳೆ ಮೆಲೋನಿ ಅವರು ನಾವು ಇನ್‌ಸ್ಟಾಗ್ರಾಮ್‌ನಲ್ಲಿ ಫೇಮಸ್ ಕಪಲ್ ಅಂತ ಹೇಳಿದ್ದಾರೆ. ಅದಕ್ಕೆ ಮೋದಿ ನಗುತ್ತಾ ಪ್ರತಿಕ್ರಿಯಿಸಿರುವ ವಿಡಿಯೋ ಮೆಲೋಡಿ ಬಝ್ ಎಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಅಮೆರಿಕ ಇರಾನ್ ನಡುವಿನ ಮಹತ್ವದ ಒಪ್ಪಂದ ಸ್ವಾಗತಿಸಲು ಫ್ರಾನ್ಸ್ ನ ಎವಿಯನ್-ಲೆಸ್-ಬೇನ್ಸ್ ನಲ್ಲಿ 7 ರಾಷ್ಟ್ರಗಳ ಒಕ್ಕೂಟ (ಜಿ7) ನಾಯಕರು ಒಂದೆಡೆ ಸೇರಿದ್ದಾರೆ. ಈ ಮಧ್ಯೆ ಮೆಲೋನಿ ಮೋದಿ ನಡುವಿನ ಸಂಕ್ಷಿಪ್ತ ಮಾತುಕತೆ ಸಖತ್ ವೈರಲ್ ಆಗಿದೆ.

## ಭಾರತದ ರಕ್ಷಣಾ ಉತ್ಪನ್ನ ಸಾಮರ್ಥ್ಯ 1.78 ಲಕ್ಷ ಕೋಟಿಗೆ ಏರಿಕೆ

ನವದೆಹಲಿ: ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತದ ವಾರ್ಷಿಕ ರಕ್ಷಣಾ ಉತ್ಪಾದನೆಯು ಸಾರ್ವಕಾಲಿಕ ಗರಿಷ್ಠ ರೂ. 1.78 ಲಕ್ಷ ಕೋಟಿಗಳನ್ನು ತಲುಪಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.




ಈ ಮೈಲಿಗಲ್ಲು ಹಿಂದಿನ ಹಣಕಾಸು ವರ್ಷದ ರೂ. 1.54 ಲಕ್ಷ ಕೋಟಿ ಉತ್ಪಾದನೆಗಿಂತ ಶೇ. 15.6 ರಷ್ಟು ಬೆಳವಣಿಗೆಯನ್ನು ಪ್ರತಿನಿಧಿಸುತ್ತದೆ ಮತ್ತು 2020-21ರಲ್ಲಿ ಈ ಸಂಖ್ಯೆ ರೂ. 84,643 ಕೋಟಿಗಳಾಗಿದ್ದವು, ಇದು ಶೇ. 110 ರಷ್ಟು ಹೆಚ್ಚಳವಾಗಿದೆ ಎಂದು ಅದು ಹೇಳಿದೆ. ಇತ್ತೀಚಿನ ವರ್ಷಗಳಲ್ಲಿ ಭಾರತದ ರಕ್ಷಣಾ ಉತ್ಪಾದನೆಯಲ್ಲಿನ ಗಮನಾರ್ಹ ಏರಿಕೆ ರಕ್ಷಣಾ ಉತ್ಪಾದನಾ ಇಲಾಖೆ ಮತ್ತು ಇತರ ಎಲ್ಲಾ ಪಾಲುದಾರರ ಸಾಮೂಹಿಕ ಪ್ರಯತ್ನಗಳ ಫಲಿತಾಂಶವಾಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು. ಈ ಮೇಲ್ಮುಖ ಪಥವು ದೇಶದ ವಿಸ್ತರಿಸುತ್ತಿರುವ ರಕ್ಷಣಾ ಕೈಗಾರಿಕಾ ನೆಲೆಯ ಸ್ಪಷ್ಟ ಸೂಚಕವಾಗಿದೆ ಎಂದು ಅವರು ಹೇಳಿದರು.ನಿರಂತರ ನೀತಿ ಬೆಂಬಲ, ಹಲವಾರು ಹೊಸ ಉಪಕ್ರಮಗಳು, ಹೆಚ್ಚಿದ ಖಾಸಗಿ ವಲಯದ ಭಾಗವಹಿಸುವಿಕೆ ಮತ್ತು ಬೆಳೆಯುತ್ತಿರುವ ರಫ್ತು ಸಾಮರ್ಥ್ಯಗಳೊಂದಿಗೆ, ರಕ್ಷಣಾ ಉತ್ಪಾದನಾ ವಲಯವು ಮುಂದಿನ ವರ್ಷಗಳಲ್ಲಿ ನಿರಂತರ ವೇಗವರ್ಧನೆಗೆ ಸಿದ್ಧವಾಗಿದೆ ಎಂದು ಅವರು ಹೇಳಿದರು.

ಜನಶ್ರೀ ಟೈಮ್ಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ರಾಜ್ಯ ಸಾರಿಗೆ ಇಲಾಖೆಯಲ್ಲಿ ಶೇ.50ಕ್ಕಿಂತ ಹೆಚ್ಚು ಹುದ್ದೆಗಳು ಖಾಲಿ

ಬೆಂಗಳೂರು: ರಾಜ್ಯ ಸಾರಿಗೆ ಇಲಾಖೆಯಲ್ಲಿ ಶೇ.50ಕ್ಕಿಂತಲೂ ಹೆಚ್ಚಿನ ಹುದ್ದೆಗಳು ಖಾಲಿಯಿರುವುದರಿಂದ ದಿನನಿತ್ಯದ ಸಾರಿಗೆ ಇಲಾಖೆಯ ದೈನಂದಿನ ಚಟುವಟಿಕೆಗಳಿಗೆ ತೀವ್ರ ಅಡಚಣೆಯಾಗುತ್ತಿದ್ದು, ಬಾಕಿ ಹುದ್ದೆಗಳ ಭರ್ತಿಗೆ ನೂತನ ಸಚಿವರಿಗೆ ಸವಾಲಾಗಿದೆ.

ಹಿಂದೆ ಸಾರಿಗೆ ಸಚಿವರಾಗಿದ್ದ ರಾಮಲಿಂಗಾರೆಡ್ಡಿ ಬಾಕಿ ಹುದ್ದೆಗಳ ಭರ್ತಿಗೆ ಸಾಕಷ್ಟು ಪ್ರಯತ್ನ ಮಾಡಿದ್ದರು. ಆದರೆ ಒಳಮೀಸಲಾತಿಯ ಕಾರಣಕ್ಕಾಗಿ ಅದು ಸಾಧ್ಯವಾಗಲಿಲ್ಲ. ಸಾರಿಗೆ ಇಲಾಖೆಯ ಆಡಳಿತ ಮತ್ತು ಕಾರ್ಯಾಂಗಕ್ಕೆ ಒಟ್ಟು 2800 ಹುದ್ದೆಗಳು ಮಂಜೂರಾಗಿವೆ. ಅವುಗಳ ಪೈಕಿ 1541 ಹುದ್ದೆಗಳು ಖಾಲಿಯಿದ್ದು, ಶೇಕಡವಾರು 45 ರಷ್ಟು ಸಿಬ್ಬಂದಿಗಳ ಕೊರತೆಯಿದೆ. ಈಗ ಒಳಮೀಸಲಾತಿಯ ವಿವಾದ ಬಗೆಹರಿದಿರುವುದರಿಂದ ನೇಮಕಾತಿ ಪ್ರಕ್ರಿಯೆಗಳನ್ನು ಆರಂಭಿಸುತ್ತಿರುವುದಾಗಿ ಸಾರಿಗೆ ಇಲಾಖೆ ತಿಳಿಸಿದೆ.

ಆದರೆ ಆರ್ಥಿಕ ಇಲಾಖೆಯ ಅನುಮೋದನೆ ಸಿಕ್ಕಿರುವುದು ಬೆರಳೆಣಿಕೆಯ ಹುದ್ದೆಗಳಿಗಷ್ಟೆ. ಅನುಮೋದಿತ ಹುದ್ದೆಗಳು ನೇಮಕವಾದರೂ ಕೂಡ ಸಾರಿಗೆ ಇಲಾಖೆಯ ಕಾರ್ಯನಿರ್ವಹಣೆ ಚುರುಕು ಪಡೆಯಲು ಸಾಧ್ಯವಿಲ್ಲ. ಭಾರೀ ಸಂಖ್ಯೆಯಲ್ಲಿ ಸಿಬ್ಬಂದಿಗಳ ಕೊರತೆಯನ್ನು ಅನುಭವಿಸುತ್ತಿರುವ ಸಾರಿಗೆ ಇಲಾಖೆಯ ಕಾರ್ಯನಿರ್ವಹಣೆಯಲ್ಲಿ




ನಿಧಾನಗತಿಗೆ ದಿನನಿತ್ಯ ಜನಸಾಮಾನ್ಯರು ಇಡೀ ಶಾಪ ಹಾಕುತ್ತಿದ್ದಾರೆ. ಚಾಲನ ಪರವಾನಗಿ, ವಾಹನಗಳ ನೋಂದಣಿ, ಎಫ್‌ಸಿ ನವೀಕರಣ ಸೇರಿದಂತೆ ಪ್ರಮುಖ ಕೆಲಸ ಕಾರ್ಯಗಳಿಗೆ ತೀವ್ರ ಅಡಚಣೆಯಾಗುತ್ತಿದೆ. ರಾಜ್ಯದಲ್ಲಿ 71 ಪ್ರಾದೇಶಿಕ ಸಾರಿಗೆ ಕಚೇರಿಗಳನ್ನು ಆರಂಭಿಸುವ ಉದ್ದೇಶವಿದೆ. ಆದರೆ ಈವರೆಗೂ 67 ಕಚೇರಿಗಳು ಮಾತ್ರ ಕಾರ್ಯನಿರ್ವಹಿಸುತ್ತಿದ್ದು, ಇನ್ನೂ 4 ಕಚೇರಿಗಳು ಬಾಕಿ ಉಳಿದಿವೆ. 430 ಮೋಟಾರ್ ವಾಹನ ನಿರೀಕ್ಷಕರ ಹುದ್ದೆಗಳು ಮಂಜೂರಾಗಿದ್ದು, 156 ಮಂದಿ ಮಾತ್ರ ಕೆಲಸ ನಿರ್ವಹಿಸುತ್ತಿದ್ದಾರೆ. ಶೇ.63ರಷ್ಟು ಹುದ್ದೆಗಳು ಖಾಲಿ ಇವೆ. 435 ಎಫ್‌ಡಿಎ ಪೈಕಿ ಇನ್ನೂ ಶೇ. 16ರಷ್ಟು ಹುದ್ದೆಗಳು ಭರ್ತಿಯಾಗಬೇಕು. ಎಸ್‌ಡಿಎಗಳ ಪೈಕಿ 345 ಅಂದರೆ ಸುಮಾರು ಶೇ.63 ರಷ್ಟು ಹುದ್ದೆಗಳು ಖಾಲಿ ಇವೆ. ಆರ್‌ಟಿಒ ಹುದ್ದೆಗಳು ಮಂಜೂರಾತಿಯೇ ಕಡಿಮೆ ಇದೆ. ಈ ಹಿಂದೆ 47 ಸಾರಿಗೆ ಕಚೇರಿಗಳಿದ್ದವು. ಅದಕ್ಕನುಗುಣವಾಗಿ ಹುದ್ದೆಗಳನ್ನು ಮಂಜೂರು ಮಾಡಲಾಗಿತ್ತು. ಕಾಲಾ ನಂತರ 20 ಸಾರಿಗೆ ಕಚೇರಿಗಳು ಹೆಚ್ಚಾಗಿವೆ. ಆದರೆ ಅದಕ್ಕನುಗುಣವಾಗಿ ಆರ್‌ಟಿಒ ಹುದ್ದೆಗಳು ಮಂಜೂರಾಗಿಲ್ಲ, ಸಾರಿಗೆ ಇಲಾಖೆಯಲ್ಲಿ ನೇಮಕಾತಿ ಗೊಂಡವರು ಎರವಲು ಸೇವೆಯ ಮೇಲೆ ಅನ್ಯ ಇಲಾಖೆಗಳತ್ತ ವಲಸೆ ಹೋಗಿದ್ದಾರೆ.

ಸಚಿವರ ಕಚೇರಿ ಹಾಗೂ ಇತರ ಆಯಾ ಕಟ್ಟಿನ ಸ್ಥಳಗಳಲ್ಲಿ ಬಿಗಿಪಟ್ಟು ಹಾಕಿ ಕುಳಿತ್ತಿರುವ ಸಾರಿಗೆ ಇಲಾಖೆಯ ಅಧಿಕಾರಿಗಳನ್ನು ಮಾತ್ರ ಇಲಾಖೆಗೆ ಕರೆಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನಗಳಾಗಿಲ್ಲ. ರಾಜ್ಯ ಸರ್ಕಾರ ಅನಗತ್ಯ ವಿವಾದಗಳಲ್ಲೇ ಕಾಲಾಹರಣ ಮಾಡುತ್ತಿದ್ದು, ಸಿಬ್ಬಂದಿಗಳ ನೇಮಕಾತಿ ವಿಚಾರವನ್ನು ಉದ್ದೇಶ ಪೂರಕವಾಗಿ ಕಡೆಗಣಿಸಿದಂತ್ತಿದೆ. ಒಟ್ಟು 43 ಇಲಾಖೆಗಳಿಂದ 2.84 ಲಕ್ಷ ಹುದ್ದೆಗಳು ಖಾಲಿ ಉಳಿದಿವೆ. ಈ ಹಿಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ 56 ಸಾವಿರ ಹುದ್ದೆಗಳ ನೇಮಕಾತಿಗೆ ಸಂಪುಟದಲ್ಲಿ ತೀರ್ಮಾನಿಸಲಾಗಿತ್ತು. ಆದರೆ ನೇಮಕಾತಿ ಪ್ರಕ್ರಿಯೆ ಇನ್ನೂ ಶುರುವಾಗಿಲ್ಲ. ಈಗಿನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕರ್ನಾಟಕ ಲೋಕಸೇವಾ ಆಯೋಗದ ಅಧಿಕಾರಿಗಳ ಜೊತೆ ಚರ್ಚೆ ನಡೆಸಿದ್ದರು. ಆಯ್ಕೆ ಪ್ರಕ್ರಿಯೆಯನ್ನು ಲೋಕಸೇವಾ ಆಯೋಗಕ್ಕೆ ನೀಡಬೇಕೇ? ಅಥವಾ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ವಹಿಸಬೇಕೇ? ಎಂಬ ಬಗ್ಗೆ ಇನ್ನೂ ಗೊಂದಲಗಳಿವೆ. ಹೀಗಾಗಿ ಖಾಲಿ ಹುದ್ದೆಗಳ ಭರ್ತಿ ವಿಳಂಬವಾಗುತ್ತಿದ್ದು, ಜನ ಸಾಮಾನ್ಯರು ನಿತ್ಯ ನರಕ ಅನುಭವಿಸುತ್ತಿದ್ದಾರೆ.ಶೇ. 63ರಷ್ಟು ಮೋಟಾರು ಇನ್?ಸಪೆಕ್ಟರ್‌ಗಳ ಹುದ್ದೆ ಖಾಲಿ ಇದ್ದಾಗ ಇಲಾಖೆಯನ್ನು ನಿಭಾಯಿಸುವುದು ದೊಡ್ಡ ಸವಾಲಾಗಿದೆ.

# ದಿನಕ್ಕೆ 12 ಗಂಟೆ ಕೆಲಸ, 300 ರೂ. ಗಳಿಕೆ : ಮುಂಬೈನ ವೃದ್ಧ ಬೀದಿವ್ಯಾಪಾರಿ ವಿಡಿಯೋ ವೈರಲ್

ಮುಂಬೈ: ಮುಂಬೈನ ವೃದ್ಧ ಬೀದಿವ್ಯಾಪಾರಿಯೊಬ್ಬರ ಹೃದಯಸ್ಪರ್ಶಿವಿಡಿಯೋವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ಲಾಗಿದ್ದು, ಇಳಿ ವಯಸ್ಸಿನಲ್ಲೂ ಮಧ್ಯರಾತ್ರಿವರೆಗೂ ಅಂಗಡಿಯಲ್ಲಿ ಕೆಲಸ ಮಾಡುತ್ತಿರುವ ವೃದ್ಧನ ಹುಮಸ್ಸು ಯುವಕರಿಗೆ ಸ್ಪೂರ್ತಿ ನೀಡುತ್ತಿದೆ.

82 ವರ್ಷದ ಮನ್ಸುಖ್ ಕಾಕಾ ಎಂದು ಗುರುತಿಸಲ್ಪಟ್ಟ ಈ ವ್ಯಕ್ತಿ, ತನ್ನ ವಯಸ್ಸು ಮತ್ತು ಸಾಧಾರಣ ಗಳಿಕೆಯ ಹೊರತಾಗಿಯೂ ಪ್ರತಿದಿನ ಪಾದಚಾರಿ ಮಾರ್ಗದಲ್ಲಿ ಮನೆಯಲ್ಲಿ ತಯಾರಿಸಿದ ತಿಂಡಿ ಪಾಕೆಟ್‌ಗಳನ್ನು ದಿನದಲ್ಲಿ ದೀರ್ಘ ಗಂಟೆಗಳ ಮಾರಾಟ ಮಾಡುತ್ತಿದ್ದಾರೆ.

ಮನ್ಸುಖ್ ಕಾಕಾ ದಶಕಗಳ ಕಾಲ ಸೀರೆ ಅಂಗಡಿಯಲ್ಲಿ ಮಾರಾಟಗಾರನಾಗಿ ಕೆಲಸ ಮಾಡುತ್ತಿದ್ದರು. ಕೋವಿಡ್ -19 ಸಂದರ್ಭದಲ್ಲಿ ತೀವ್ರ ಅನಾರೋಗ್ಯಕ್ಕೆ ಒಳಗಾಗಿ ತಮ ಕೆಲಸವನ್ನು ಕಳೆದುಕೊಂಡಿದ್ದರು. ಅವರನ್ನು ನೋಡಿಕೊಳ್ಳಲು ಮಗ ಕೂಡ ತೊರೆಯಬೇಕಾಗಿತ್ತು. ಚೇತರಿಸಿಕೊಂಡ ನಂತರ ಮನ್ಸುಖ್ ಕಾಕಾ ತಮ ಕುಟುಂಬವನ್ನು ಪೋಷಿಸಲು ತಮ ಮನೆಯ ಬಳಿ ಒಂದು ಸಣ್ಣ ತಿಂಡಿ ಅಂಗಡಿಯನ್ನು ತೆರೆದಿದ್ದು, ಗ್ರಾಹಕರ ಬರುವಿಕೆಯನ್ನೇ ತಾಳೆಯಿಂದ ಕಾಯುವ ವೃದ್ಧ ದಿನಕ್ಕೆ ಸುಮಾರು 12 ಗಂಟೆಗಳ ಕಾಲ ಕೆಲಸ ಮಾಡುತ್ತಾರೆ. ವೈರಲ್ಲಾದ ವಿಡಿಯೋದಲ್ಲಿ ಫರ್ಸಾನ್ ಪ್ಯಾಕೆಟ್‌ಗಳನ್ನು ಜೋಡಿಸುವುದು, ಗ್ರಾಹಕರನ್ನು ಸ್ವಾಗತಿಸುವುದು ಮತ್ತು ಗಮನಾರ್ಹ ಸಮರ್ಪಣೆಯೊಂದಿಗೆ ತಮ ವ್ಯವಹಾರವನ್ನು ನಿರ್ವಹಿಸುವುದು ಕಂಡುಬಂದಿದೆ.

ಸಾಮಾಜಿಕ ಕಳಕಳಿಯುಳ್ಳ ಆರಾಧನಾ ಚಟರ್ಜಿ ಎಂಬುವರು ಇದನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಟ್ಟಿದ್ದಾರೆ. ಮನ್ಸುಖ್ ಕಾಕಾ ಅವರ ಸಹೋದರಿ ಈ ತಿಂಡಿಗಳನ್ನು ಮನೆಯಲ್ಲಿಯೇ ತಯಾರಿಸಿ ಕೊಡುತ್ತಾರೆ. ನಂತರ ಅವುಗಳನ್ನು ಪ್ರತಿದಿನ ಪ್ಯಾಕ್ ಮಾಡಿ ಅಂಗಡಿಗೆ ತರುತ್ತಾರೆ. ಅವರ ಪರಿಶ್ರಮ ಮತ್ತು




ದೀರ್ಘ ಸಮಯದ ಹೊರತಾಗಿಯೂ, ದೈನಂದಿನ ಗಳಿಕೆ ಸರಾಸರಿ 300 ರೂ. ಮಾತ್ರ. ವಯಸ್ಸಾದ ವೃದ್ಧ ಪ್ರತಿ ವಹಿವಾಟಿನ ಕೈಬರಹದ ದಾಖಲೆಯನ್ನು ಸಣ್ಣ ಡೈರಿಯಲ್ಲಿ ಎಚ್ಚರಿಕೆಯಿಂದ ಬರೆದಿಡುತ್ತಾರೆ. ಈ ವಯಸ್ಸಿನಲ್ಲೂ, ತುಂಬಾ ಉತ್ಸಾಹ ಮತ್ತು ಕಠಿಣ ಪರಿಶ್ರಮದಿಂದ ತನ್ನ ಅಂಗಡಿಯನ್ನು ನಡೆಸಲು ತನ್ನ ಕೈಲಾದಷ್ಟು ಪ್ರಯತ್ನಿಸುತ್ತಿದ್ದಾರೆ.

ಅನೇಕ ಸಾಮಾಜಿಕ ಮಾಧ್ಯಮ ಬಳಕೆದಾರರು ಸ್ಟಾಲ್ ಇರುವ ಸ್ಥಳದ ಬಗ್ಗೆ ವಿವರಗಳನ್ನು ಕೋರಿದ್ದು, ತಮ ಮನೆಯಲ್ಲಿ ತಯಾರಿಸಿದ ತಿಂಡಿಗಳನ್ನು ಖರೀದಿಸಿ ಅವರ ಜೀವನೋಪಾಯಕ್ಕೆ ಕೊಡುಗೆ ನೀಡುವ ಬಯಕೆಯನ್ನು ವ್ಯಕ್ತಪಡಿಸಿದ್ದಾರೆ.

# ಮೊದಲ ಹ್ಯಾಟ್ರಿಕ್ ಗೋಲು ಬಾರಿಸಿ ಮೆಸ್ಸಿ ಮಿಂಚು : ಅಲ್ಜೀರಿಯಾ ವಿರುದ್ಧ ಅರ್ಜೆಂಟೀನಾ 3-0 ಗೆಲುವು

ಕಾನ್ಸಾಸ್ ಸಿಟಿ (ಅಮೆರಿಕ): ಫುಟ್‌ಬಾಲ್ ದಿಗ್ಗಜ ಲಿಯೊನೆಲ್ ಮೆಸ್ಸಿ ವಿಶ್ವಕಪ್ ಇತಿಹಾಸದಲ್ಲಿ ತಮ ಮೊದಲ ಹ್ಯಾಟ್ರಿಕ್ ಗೋಲಿನ ದಾಖಲೆ ಮಾಡಿ ಮಿಂಚಿದ್ದಾರೆ. ಜರ್ಮನಿಯ ಮಿರೊಸ್ಲಾವ್ ಕ್ಲೋಸೆ ಅವರ ಅತಿ ಹೆಚ್ಚು ಗೋಲುಗಳ ದಾಖಲೆಯನ್ನು ಸರಿಗಟ್ಟಿದರು ಮೆಸ್ಸಿ ಅದ್ಭುತ ಪ್ರದರ್ಶನದ ನೆರವಿನಿಂದ ಅರ್ಜೆಂಟೀನಾ ತಂಡ ಅಲ್ಜೀರಿಯಾ ವಿರುದ್ಧ 3-0 ಗೋಲುಗಳ ಭರ್ಜರಿ ಜಯ ಸಾಧಿಸಿದೆ.

ಹಾಲಿ ಚಾಂಪಿಯನ್ ಅರ್ಜೆಂಟೀನಾ ತನ್ನ ವಿಶ್ವಕಪ್ ಅಭಿಯಾನವನ್ನು ಶುಭಾರಂಭ ಮಾಡಿದೆ. ಅಮೆರಿಕದ ಕಾನ್ಸಾಸ್ ಸಿಟಿಯ ಆರೋಹೆಡ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೆಸ್ಸಿಆರಂಭದಿಂದಲೇ ಮಿಂಚಿದರು. ಇಂಟರ್ ಮಿಯಾಮಿ ತಂಡದ ಸಹ ಆಟಗಾರ ರೊಡ್ರಿಗೊ ಡಿ ಪೌಲ್ ನೀಡಿದ ಅದ್ಭುತ ಪಾಸ್ ಅನ್ನು ಗೋಲಾಗಿ ಪರಿವರ್ತಿಸುವ ಮೂಲಕ ಅವರು ಪಂದ್ಯದ ಆರಂಭಿಕ ನಿಮಿಷಗಳಲ್ಲೇ ಅರ್ಜೆಂಟೀನಾಗೆ ಮುನ್ನಡೆ ತಂದುಕೊಟ್ಟರು. ಎರಡನೇ?ರ್ಧದ ಆರಂಭದಲ್ಲೇ ಮತ್ತೊಂದು ಗೋಲು ದಾಖಲಿಸಿದ ಮೆಸ್ಸಿ, ಪಂದ್ಯ ಮುಗಿಯುವ ಕೆಲ ಕ್ಷಣಗಳ ಮೊದಲು ಮೂರನೇ ಗೋಲು ಬಾರಿಸಿ ತಮ್ಮ ಮೊದಲ ವಿಶ್ವಕಪ್ ಹ್ಯಾಟ್ರಿಕ್ ಪೂರ್ಣಗೊಳಿಸಿದರು. ಬಳಿಕ ಅವರು ಮೈದಾನ ತೊರೆಯುವಾಗ ಕ್ರೀಡಾಂಗಣದಲ್ಲಿದ್ದ ಸಾವಿರಾರು ಅಭಿಮಾನಿಗಳು ಎದ್ದು ನಿಂತು ಚಪ್ಪಾಳೆ ತಟ್ಟಿ ಗೌರವ ಸಲ್ಲಿಸಿದರು.

ಈ ಮೂರು ಗೋಲುಗಳೊಂದಿಗೆ ಮೆಸ್ಸಿವಿಶ್ವಕಪ್‌ನಲ್ಲಿ ತಮ ಗೋಲುಗಳ ಸಂಖ್ಯೆಯನ್ನು 16ಕ್ಕೆ ಏರಿಸಿಕೊಂಡು ಜರ್ಮನಿಯ ಮಾಜಿ ಆಟಗಾರ ಮಿರೊಸ್ಲಾವ್ ಕ್ಲೋಸೆ ಅವರ ದಾಖಲೆಯ ಸಮಬಲ ಸಾಧಿಸಿದರು. ಮುಂದಿನ ಪಂದ್ಯಗಳಲ್ಲಿ ಅವರು ಈ ದಾಖಲೆಯನ್ನು



ಹಿಂದಿಕ್ಕುವ ಸಾಧ್ಯತೆ ಹೆಚ್ಚಿದೆ. ರೊಸಾರಿಯೊ ಮೂಲದ ಮೆಸ್ಸಿ ವಿಶ್ವಕಪ್‌ನ ಐದು ವಿಭಿನ್ನ ಆವೃತ್ತಿಗಳಲ್ಲಿ ಗೋಲು ದಾಖಲಿಸಿದ ಕೇವಲ ಎರಡನೇ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ವಿಶ್ವಕಪ್‌ಗೆ ಅವರು ಪಾದಾರ್ಪಣೆ ಮಾಡಿದ್ದು 20 ವರ್ಷಗಳ ಹಿಂದೆ ಸರ್ಬಿಯಾ ಮತ್ತು ಮೊಂಟೆನೆಗ್ರೊ ವಿರುದ್ಧದ ಪಂದ್ಯದಲ್ಲಿ ಅಂದೂ ಅವರು ಗೋಲು ದಾಖಲಿಸಿದ್ದರು. ಇದು ಮೆಸ್ಸಿಅವರ ವೃತ್ತಿಜೀವನದ 61ನೇ ಹ್ಯಾಟ್ರಿಕ್ ಆಗಿದ್ದು, ಅರ್ಜೆಂಟೀನಾ ರಾಷ್ಟ್ರೀಯ ತಂಡದ ಪರ ದಾಖಲಿಸಿದ 11ನೇ ಹ್ಯಾಟ್ರಿಕ್ ಆಗಿದೆ. ಅಲ್ಲದೆ, ವಿಶ್ವಕಪ್‌ನಲ್ಲಿ ಸತತ ಐದು ಪಂದ್ಯಗಳಲ್ಲಿ ಗೋಲು ಗಳಿಸಿದ ಸಾಧನೆಯನ್ನೂ ಅವರು ಮಾಡಿದರು.

ಲಿಯೋ ಬಗ್ಗೆ ಹೇಳಲು ನನ್ನ ಬಳಿ ಪದಗಳೇ ಇಲ್ಲ. ಅವರು ಅದ್ಭುತ ಆಟಗಾರ. ಫುಟ್‌ಬಾಲ್ ಪ್ರಪಂಚದ ಪ್ರತಿಯೊಬ್ಬರೂ ಅವರನ್ನು ಆಡುತ್ತಿರುವುದನ್ನು ನೋಡಲು ಬಯಸುತ್ತಾರೆ ಮತ್ತು ಆನಂದಿಸುತ್ತಾರೆ ಎಂದು ಅರ್ಜೆಂಟೀನಾ ಮುಖ್ಯ ಕೋಚ್ ಲಿಯೊನೆಲ್ ಸ್ಕಲೋನಿ ಹೇಳಿದ್ದಾರೆ. ಮೆಸ್ಸಿಯ ಪ್ರದರ್ಶನವು ಇದೇ ದಿನ ಮಿಂಚಿದ್ದ ಇತರ ಇಬ್ಬರು ತಾರಾ ಆಟಗಾರರಾದ ಫ್ರಾನ್?ಸನ ಕೈಲಿಯನ್ ಎಂಬಾಪೆ ಮತ್ತು ನಾರ್ವೆಯ ಎರ್ಲಿಂಗ್ ಹಾಲೆಂಡ್ ಅವರ ಸಾಧನೆಗಳನ್ನು ಮರೆಮಾಡಿತು. ಸೆನೆಗಲ್ ವಿರುದ್ಧ ಫ್ರಾನ್?ಸನ 3-1 ಗೆಲುವಿನಲ್ಲಿ ಎಂಬಾಪೆ ಎರಡು ಗೋಲು ಗಳಿಸಿ ವಿಶ್ವಕಪ್ ಗೋಲುಗಳ ಪಟ್ಟಿಯಲ್ಲಿ 14 ಗೋಲುಗಳೊಂದಿಗೆ ನಾಲ್ಕನೇ ಸ್ಥಾನವನ್ನು ಹಂಚಿಕೊಂಡರು. ಮತ್ತೊಂದೆಡೆ ಇರಾಕ್ ವಿರುದ್ಧ ನಾರ್ವೆಯ 4-1 ಜಯದಲ್ಲಿ ಹಾಲೆಂಡ್ ಎರಡು ಗೋಲು ದಾಖಲಿಸಿದರು. ಮೆಸ್ಸಿ ಒಬ್ಬ ಹುಚ್ಚು ಪ್ರತಿಭೆ ಎಂದು ಹಾಲೆಂಡ್ ಸಾಮಾಜಿಕ ಜಾಲತಾಣ ಸ್ನಾಪ್‌ಚಾಟ್‌ನಲ್ಲಿ ಪ್ರತಿಕ್ರಿಯಿಸಿದರು.ಮುಂದಿನ ವಾರ 39ನೇ ವಯಸ್ಸಿಗೆ ಕಾಲಿಡಲಿರುವ ಮೆಸ್ಸಿ, ವಿಶ್ವಕಪ್‌ಗೆ ಮುನ್ನ ಇಂಟರ್ ಮಿಯಾಮಿ ಪರ ಆಡುತ್ತಿದ್ದಾಗ ಸಣ್ಣ ಪ್ರಮಾಣದ ಹ್ಯಾಮ್‌ಸ್ಟ್ರಿಂಗ್ ಗಾಯದಿಂದ ಬಳಲುತ್ತಿದ್ದರು. ಆದರೂ, ಎಂಟು ಬಾರಿ ಬ್ಯಾಲನ್ ಡಿಓರ್ ಪ್ರಶಸ್ತಿ ಗೆದ್ದಿರುವ ಅವರು ಕಳೆದ ವಾರ ಐಸ್‌ಲ್ಯಾಂಡ್ ವಿರುದ್ಧದ ಸಿದ್ಧತಾ ಪಂದ್ಯದಲ್ಲಿ ಕೇವಲ 20 ನಿಮಿಷ ಆಡಿದರೂ ಪೆನಾಲ್ಟಿ ಮೂಲಕ ಗೋಲು ದಾಖಲಿಸಿ ತಮ್ಮ ಫಿಟ್‌ನೆಸ್ ಸಾಬೀತುಪಡಿಸಿದ್ದರು. ಅಲ್ಜೀರಿಯಾ ವಿರುದ್ಧದ ಪಂದ್ಯವು ಮೆಸ್ಸಿಯ ಅಂತಾರಾಷ್ಟ್ರೀಯ ವೃತ್ತಿಜೀವನದ 200ನೇ ಪಂದ್ಯವಾಗಿತ್ತು. 2005ರಲ್ಲಿ 18ನೇ ವಯಸ್ಸಿನಲ್ಲಿ ಅವರು ಅರ್ಜೆಂಟೀನಾ ಪರ ಪದಾರ್ಪಣೆ ಮಾಡಿದ್ದರು. ಈ ಪಟ್ಟಿಯಲ್ಲಿ ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ (228ಕ್ಕೂ ಹೆಚ್ಚು ಪಂದ್ಯಗಳು) ಮತ್ತು ಕುವೈತ್‌ನ ಬಾದರ್ ಅಲ್-ಮುತಾವಾ ಮಾತ್ರ ಮೆಸ್ಸಿಗಿಂತ ಮುಂದಿದ್ದಾರೆ. ವಿಶ್ವಕಪ್‌ನ ಐದು ಆವೃತ್ತಿಗಳಲ್ಲಿ ಗೋಲು ಗಳಿಸಿದ ಆಟಗಾರರ ಪಟ್ಟಿಯಲ್ಲಿ ಮೆಸ್ಸಿ ಮತ್ತು ರೊನಾಲ್ಡೊ ಮಾತ್ರ ಸ್ಥಾನ ಪಡೆದಿದ್ದಾರೆ.

ಅರ್ಜೆಂಟೀನಾ ತಂಡವು ತನ್ನ ಶಿಬಿರವನ್ನು ಕಾನ್ಸಾಸ್ ಸಿಟಿಯಲ್ಲಿ ನಡೆಸುತ್ತಿರುವ ನಾಲ್ಕು ರಾಷ್ಟ್ರೀಯ ತಂಡಗಳಲ್ಲಿ ಒಂದಾಗಿದೆ. ತಂಡದ ಆಗಮನದ ಬಳಿಕ ಇಡೀ ಪ್ರದೇಶದಲ್ಲಿ ಮೆಸ್ಸಿ ಹುಚ್ಚು ಆವರಿಸಿದ್ದು, ಪಂದ್ಯ ದಿನ ಸಾವಿರಾರು ಅಭಿಮಾನಿಗಳು ಮೆಸ್ಸಿಯ 10ನೇ ಸಂಖ್ಯೆಯ ಜೆರ್ಸಿ ಧರಿಸಿ ಕ್ರೀಡಾಂಗಣಕ್ಕೆ ಹರಿದುಬಂದಿದ್ದರು. ಪಂದ್ಯ ವೀಕ್ಷಣಾ ಕಾರ್ಯಕ್ರಮದಲ್ಲಿ ಅರ್ಜೆಂಟೀನಾ ಜೆರ್ಸಿ ತೊಟ್ಟ ಮೇಕೆಯೊಂದನ್ನು ವೇದಿಕೆಗೆ ಕರೆತಂದಿದ್ದು, ಮೆಸ್ಸಿಯನ್ನು ಫುಟ್‌ಬಾಲ್‌ನ ಸಾರ್ವಕಾಲಿಕ ಶ್ರೇಷ್ಠ ಆಟಗಾರ ಎಂದು ಬಣ್ಣಿಸುವ ಅಭಿಮಾನಿಗಳ ಉತ್ಸಾಹಕ್ಕೆ ಸಾಕ್ಷಿಯಾಯಿತು. ಮೆಸ್ಸಿ ಮತ್ತೊಮ್ಮೆ ತಮ್ಮ ಪ್ರದರ್ಶನದ ಮೂಲಕ ಆ ಬಿರುದಿಗೆ ತಕ್ಕವರು ಎಂಬುದನ್ನು ಸಾಬೀತುಪಡಿಸಿದರು.

# ಅಪುತ್ರಸ್ಯ ಗತಿರ್ನಾಸ್ತಿ – ಒಂದು ಚಿಂತನೆ!

ಶ್ರೀರಾಮಚಂದ್ರನೇ ಮಗನಾಗಿದ್ದರೂ ದಶರಥನ ಅಂತ್ಯಕಾಲದಲ್ಲಿ ಯಾವ ಮಕ್ಕಳು ಅಲ್ಲಿ ಇರಲ್ಲಿಲ್ಲ.!! ಮಕ್ಕಳಿಲ್ಲದ ಜಟಾಯು; ಬಂಧುಬಾಂಧವರಿಲ್ಲದ ಶಬರಿಗೆ ಪರಮಾತ್ಮ ಸ್ವಯಂ ಅಂತ್ಯೇಷ್ಠಿ ಯನ್ನೂ ಕೂಡ ನೆರವೇ-ರಿಸಿದ.....ಯಾರಿಗೆ ಯಾರುಂಟು?

" ಅಪುತ್ರಸ್ಯ ಗತಿರ್ನಾಸ್ತಿ " – " ಮಕ್ಕಳಿಲ್ಲದವನಿಗೆ ಸದ್ಗತಿಯಿಲ್ಲ ". ಈ ಮಾತು ಪುರಾಣಗಳಲ್ಲಿ ಪ್ರಸಿದ್ಧ. " ತ್ರಾತಾ ಯಾ ಏವ ನರಕಾತ್ ಸಹಿ ಪುತ್ರನಾಮ " ಎಂದು ಸುಮಧ್ವವಿಜಯದಲ್ಲಿ ಹೇಳಿರುವಂತೆ " ಪುತ್ " ಯೆಂಬ ನರಕದಿಂದ ರಕ್ಷಿಸುವವನೇ " ಪುತ್ರ ".

ಪುತ್ರನಿಲ್ಲದವನು ಈ ನರಕದಿಂದ ಪಾರಾಗಲು ಸಾಧ್ಯವಿಲ್ಲ. ಸತ್ಪುತ್ರನನ್ನು ಪಡೆದಾಗ ಮಾತ್ರ " ಪಿತೃ ಋಣ " ದಿಂದ ಮುಕ್ತಿ.ಎಂದರೆ ಸಂತಾನವಿಲ್ಲದವನಿಗೆ " ಸದ್ಗತಿ " ಇಲ್ಲವೆಂದು ಶಾಸ್ತ್ರಗಳ ಅಭಿಪ್ರಾಯವಲ್ಲ. " ಸ್ವಕರ್ಮಣಾ ತಮಭ್ಯರ್ಚ ಸಿದ್ಧಿಂ ವಿಂದತಿ ಮಾನವಃ " ಎಂಬ ಶ್ರೀ ಕೃಷ್ಣ ಪರಮಾತ್ಮನ ಮಾತಿನಂತೆ ತನ್ನ ವರ್ಣಾಶ್ರಮಗಳಿಗೆ ವಿಹಿತವಾದ ಕರ್ತವ್ಯವನ್ನು ಪ್ರಾಮಾಣಿಕವಾಗಿ ಅನುಷ್ಠಾನ ಮಾಡುವುದರಿಂದಲೇ ಮನುಷ್ಯನು " ಸದ್ಗತಿ " ಯನ್ನು ಹೊಂದುವನು.

ಜೀವನು ಮೋಕ್ಷವನ್ನು ಹೊಂದಲು ಮಕ್ಕಳು ಕಾರಣರಲ್ಲ. " ನಾನ್ಯಪಂಥಾವಿದ್ಯತೇಯನಾಯ " ಶ್ರುತಿಯು ಇತರ ಮಾರ್ಗಗಳನ್ನು ನಿಷೇಧಿಸಿ ಕೇವಲ ತಾನು ಸಂಪಾದಿಸಿದ ಭಗವಂತನ ಜ್ಞಾನ, ಭಕ್ತಿ ಪ್ರಸಾದವೇ " ಮೋಕ್ಷ " ಕ್ಕೆ ಕಾರಣವೆಂದು ಸ್ಪಷ್ಟ ಪಡಿಸಿದೆ.

" ಐತರೇಯ ಭಾಷ್ಯ " ಹೇಳುವಂತೆ....

ದುರ್ಗಂಧಮಯವಾದ ನರಕದಿಂದ ರಕ್ಷಿಸುವವನು " ಜನಾರ್ದನನೇ ". ಆದ್ದರಿಂದ ಪುತ್ರನಲ್ಲಿದ್ದು " ಪುತ್ರ " ಶಬ್ದದಿಂದ ವಾಚ್ಯನಾಗಿರುವನು. ಇಂತಹಾ ಪರಮಾತ್ಮನ ಉಪಾಸನೆಯಿಂದಲೇ ನಾವು " ಪುತ್ " ಯೆಂಬ ನರಕದಿಂದ ಪಾರಾಗುವವು! ಸ ಏವ ಪುತ್ರ ಸಂಸ್ಥಶ್ಚ ಪುತ್ರನಾಮಾ ಜನಾರ್ದನಃ ?

ತ್ರಾಣಾತ್ ಪೂತಿತ ಏವಾಸೌ ??

ಯಾವ ಉದ್ದೇಶದಿಂದ ಜೀವನು ಜನ್ಮ ತಾಳಿರುವನೋ ಆ ಉದ್ದೇಶ ನೆರವೇರದೇ ಅವನಿಗೆ



ಸದ್ಗತಿಯಿಲ್ಲ. ಆದ್ದರಿಂದಲೇ " ಪಾಂಡು ಚಕ್ರವರ್ತಿ " ಗೆ " ಬ್ರಹ್ಮ ಲೋಕ " ವನ್ನು ಕುರಿತು ತೆರಳಲು ಸಾಧ್ಯವಾಗಲಿಲ್ಲ. ಭೀಮಸೇನ – ಅರ್ಜುನ – ಧರ್ಮರಾಜ ಉತ್ತಮ ಮಕ್ಕಳನ್ನು ಪಡೆಯುವ ಭಾಗ್ಯ ಪಾಂಡು ಚಕ್ರವರ್ತಿಯದಾಗಿತ್ತು. ಇಂತಹಾ ಮಕ್ಕಳನ್ನು ಪಡೆಯದೇ ಅವನಿಗೆ ಸದ್ಗತಿಯಿಲ್ಲ...

ರುಕ್ಮಾಂಗದನ ಮಗ ಧರ್ಮಾಂಗದನಿಗೆ ಮಕ್ಕಳಿರಲಿಲ್ಲ. " ಏಕಾದಶೀ ವ್ರತಾಚರಣೆ " ಯ ಪುಣ್ಯದಿಂದ ಸದ್ಗತಿಯನ್ನು ಪಡೆದ. ತಂದೆ ತಾಯಿಯನ್ನು ಉತ್ತಮ ಲೋಕಕ್ಕೆ ಕರೆದೊಯ್ದ. ಈ ಪ್ರಸಂಗವನ್ನು " ಶ್ರೀಮದಾಚಾರ್ಯರು ಭಾಗವತ ತಾತ್ಪರ್ಯ ನಿರ್ಣಯ " ದಲ್ಲಿ ಉದಾಹರಿಸಿ ಮಕ್ಕಳನ್ನು ಪಡೆಯದಿದ್ದರೂ ಸದ್ಗತಿಯನ್ನು ಹೊಂದಲು ಸಾಧ್ಯವಿದೆ ಎಂದು ತಿಳಿಸಿರುವರು. ಮಕ್ಕಳಿಲ್ಲದವನು ತನ್ನ ಧರ್ಮದ ಆಚರಣೆಯಿಂದ ಉತ್ತಮ ಲೋಕವನ್ನು ಹೊಂದುವನು.

" ಅನಪತ್ಯೋಪಿ ಸದ್ಧರ್ಮಾ ಸಂಶಯಃ " ಜರತ್ಕಾರುವು ತನ್ನ ವಂಶದ ಪಿತೃ ಪಿತಾಮಹರ ತೃಪ್ತಿಗಾಗಿ ಮಕ್ಕಳನ್ನು ಪಡೆದ. ಆ ಋಷಿ ಮದುವೆ ಆಗದಿದ್ದಲ್ಲಿ " ಆಸ್ತಿಕ " ನಂಥ-ಹಾ ಉತ್ತಮ ಜ್ಞಾನಿ ಆ ವಂಶದಲ್ಲಿ ಹುಟ್ಟುವ ಅವಕಾಶವೇ ತಪ್ಪುತ್ತಿತ್ತು.

" ಮನುಸ್ಮೃತಿ " ಯಂತೆ... ಪುನ್ನಾಮ್ನೋ ನರಕಸ್ಮಾತ್ ತ್ರಾಯತೇ ಪಿತರಂ ಸುತಃ ?

ತಸ್ಮಾತ್ಪುತ್ರ ಇತಿ ಪ್ರೋಕ್ತಃ ಸ್ವಯಮೇವ ಸ್ವಯಂಭುವಃ ??

ನಿರಂತರ ಅಧ್ಯಯನದಿಂದ ಜ್ಞಾನ ಸಂಪಾದಿಸಿರುವ; ತಪಸ್ವಿಯಾದ; ವೇದಾಧ್ಯನದಲ್ಲೇ ಆಸಕ್ತನಾದ; ಭಗವಂತನಲ್ಲಿ ಸತತ ಧ್ಯಾನಶೀಲನಾದ; ತಂದೆ ತಾಯಿಗಳಲ್ಲಿ ಭಕ್ತಿ ಸಂಪನ್ನನಾದ; ಇಂದ್ರಿಯ ನಿಗ್ರಹಾದಿಗಳನ್ನು ಹೊಂದಿದವನೇ " ಸತ್ಪುತ್ರ " ಇಂಥಹಾ ಮಗನು ಮಾತ್ರ " ಪುತ್ " ಯೆಂಬ ನರಕದಿಂದ ತಂದೆ ತಾಯಿಯನ್ನು ರಕ್ಷಿಸುವವನು!

ಸನಕಾದ್ಯಾ ನಾರದಾಶ್ಚ ಋಭುರ್ಹಂಸೋರುಣಿರ್ಯತಿಃ ?

ನೈತೇ ಗೃಹಾನ್ ಬ್ರಹ್ಮಸುತಾ ಹೃದಸನ್ನೂರ್ಧ್ವರೇತಸಃ ??

ಶ್ರೀ ನಾರದರು, ಶ್ರೀ ಸನಕ ಸನಂದರೇ ಮೊದಲಾದ ಶ್ರೀ ಬ್ರಹ್ಮದೇವರ ಮಕ್ಕಳೂ ಗೃಹಸ್ಥಾಶ್ರಮವನ್ನು ಸ್ವೀಕರಿಸದೇ ಸಂನ್ಯಾಸಿಗಳಾಗಿ ಸದ್ಗತಿಯನ್ನು ಹೊಂದಿದವರು!!

ಶ್ರೀ ಭೀಷ್ಮಾಚಾರ್ಯರು ಬ್ರಹ್ಮಚರ್ಯ ವ್ರತದ ಪ್ರತಿಜ್ಞೆಯನ್ನು ಮಾಡಿದಾಗ ದೇವತೆಗಳೂ ಪುಷ್ಪ ವೃಷ್ಟಿಯನ್ನು ಸುರಿಸಿ ಸ್ವಾಗತಿಸಿದ್ದಾರೆ. ಜ್ಞಾನ ಭಕ್ತಿಗಳಿಂದಲೇ ಶ್ರೀ ಭೀಷ್ಮಾಚಾರ್ಯರು ಸದ್ಗತಿಯನ್ನು ಹೊಂದಿದವರು.

ಗೃಹಸ್ಥಾಶ್ರಮಿಯು ಸಂತಾನವನ್ನು ಪಡೆಯುವುದು ಕರ್ತವ್ಯವಾಗಿದೆ. ಆದರೆ ಪಡೆಯದಿದ್ದರೂ ಅನಥ-ರ್ಧ ಸಂಭವಿಸಲಾರದು. " ಅಪುತ್ರಸ್ಯ ಗತಿರ್ನಾಸ್ತಿ " ಯೆಂಬ ಶಾಸ್ತ್ರ ವಾಕ್ಯವು ಪ್ರಾಶಸ್ತ್ಯ ಬೋಧಕವಾಗಿದೆ. ಮಕ್ಕಳನ್ನು ಪಡೆಯದಿದ್ದರೆ ಸದ್ಗತಿಯೇ ಇಲ್ಲವೆಂದು ಈ ವಾಕ್ಯದ ಅಭಿಪ್ರಾಯವಲ್ಲ!!

ಸರ್ವೇಷಾಂ ಪುತ್ರ ಹೀನಾನಾಂ ಮಿತ್ರಃ ಪಿಂಡ ಪ್ರದಾಪಯೇತ್ ?

ಕ್ರಿಯಾಲೋಪೋ ನ ಕರ್ತವ್ಯಃ ಸರ್ವಭಾವೇ ಪುರೋಹಿತಃ ??

ಸ್ನೇಹಿತನೂ ಪಿಂಡಾಧಿಕಾರಿಯಾಗುವನು. ಶಿಷ್ಯರು ಗುರುಗಳಿಗೆ ಅಂತ್ಯಕ್ರಿಯೆ, ಶ್ರಾದ್ಧಾದಿಗಳನ್ನು ಮಾಡಬಹುದು. ಯಾರೂ ಇಲ್ಲದಿದ್ದಾಗ ಪುರೋಹಿತರು ಅಧಿಕಾರಿಗಳಾಗುವರು. ಅನಾಥ ಪ್ರೇತ ಸಂಸ್ಕಾರಾತ್ ಕೋಟಿ ಯಜ್ಞ ಫಲಂ ಲಭೇತ್ ?? ಅನಾಥವಾದ ಪ್ರೇತ ಸಂಸ್ಕಾರದಿಂದ ಕೋಟಿ ಯಜ್ಞದ ಫಲವು ಪ್ರಾಪ್ತವಾಗುವುದು

ಮುಂದುವರಿಯುವುದು....



ಪ್ರಶಾಂತಭಟ್ ಕೋಟೇಶ್ವರ

# ದೈನಂದಿನ ವ್ಯಾಯಾಮ.., ಮನೋ ದೈಹಿಕ ಆರೋಗ್ಯದ ಪ್ರಗತಿಯ ಸಂಕೇತ



ಪ್ರತಿದಿನ ನಿಯಮಿತವಾಗಿ ವ್ಯಾಯಾಮವನ್ನು ಮಾಡುವುದು ದೇಹಕ್ಕೆ ಶಕ್ತಿ, ಬಲ, ಹಾಗೂ ಸಾಮರ್ಥ್ಯವನ್ನು ಮತ್ತು ಮನಸ್ಸಿಗೆ ಶಾಂತಿ ನೆಮ್ಮದಿ ಸಮಾಧಾನ ಹಾಗೂ ಸ್ಥಿರತೆಯನ್ನು ಅತ್ಯುತ್ತಮ ಲಾಭವನ್ನು ತಂದುಕೊಡುತ್ತದೆ. ದೈಹಿಕ ಆರೋಗ್ಯ ಹಾಗೂ ಮಾನಸಿಕ ಸ್ಥಿರತೆಯ ಉದ್ದೇಶದಿಂದ ನಾವು ಮಾಡುವ ವ್ಯಾಯಾಮ ನಮಗೆ ಸಾಕಷ್ಟು ಲಾಭಗಳನ್ನು ತಂದುಕೊಡುತ್ತದೆ.... ಮೂಲಭೂತವಾಗಿ ನಮಗೆ ವ್ಯಾಯಾಮ ಮಾಡುವುದರಿಂದ ಉಂಟಾಗುವ ಅನುಕೂಲತೆಗಳ ಪಟ್ಟಿಯನ್ನು ನೋಡೋಣ

ರೋಗ ನಿಯಂತ್ರಕವಾಗಿ.... ನಿಯಮಿತವಾಗಿ ವ್ಯಾಯಾಮ ಮಾಡುವುದರಿಂದ ವಿಪರೀತ ದೈಹಿಕ ಆರೋಗ್ಯವನ್ನು ಕೆಡಿಸುವ ಕಾಯಿಲೆಗಳಿಂದ ದೂರವಿರಬಹುದು. ಹೃದ್ರೋಗ, ಪಾರ್ಶ್ವ ವಾಯು, ಟೈಪ್ ಟು ಡಯಾಬಿಟಿಸ್ ಹಾಗೂ ಹಲವಾರು ವಿಧದ ಕ್ಯಾನ್ಸರ್ ಕಾಯಿಲೆಗಳಿಂದ ರಕ್ಷಿಸುತ್ತದೆ.

ತೂಕ ನಿರ್ವಹಣೆಯಲ್ಲೂ ಕೂಡ ನಿಗದಿತ ವ್ಯಾಯಾಮ ಪ್ರಮುಖ ಪಾತ್ರವನ್ನು ವಹಿಸುತ್ತದೆ.. ವ್ಯಾಯಾಮವು ದೇಹದ ಚಯಾಪಚಯ ಕ್ರಿಯೆಯನ್ನು ಹೆಚ್ಚಿಸುವ ಜೊತೆಗೆ ಹೆಚ್ಚಿನ ಕ್ಯಾಲೋರಿಗಳನ್ನು ಸುಟ್ಟು ಹಾಕುತ್ತದೆ.

ಮಾನಸಿಕ ಆರೋಗ್ಯ ಹೆಚ್ಚುತ್ತದೆ. ಮನಸ್ಸನ್ನು ಉಲ್ಲಸಿತಗೊಳಿಸುವ ವ್ಯಾಯಾಮವು ಒತ್ತಡವನ್ನು ಕಡಿಮೆ ಮಾಡುತ್ತದೆ. ಅಶಾಂತಿಯನ್ನು ದೂರವಿರಿಸುತ್ತದೆ. ವ್ಯಾಯಾಮ ಮಾಡುವಾಗ ಬಿಡುಗಡೆಯಾಗುವ ಉತ್ತಮ ಹಾರ್ಮೋನ್ ಗಳು ಖಿನ್ನತೆಯನ್ನು ದೂರ ಮಾಡುತ್ತವೆ.

ಸಾಮರ್ಥ್ಯ ಮತ್ತು ಎಲುಬುಗಳ ಆರೋಗ್ಯ.... ಸ್ನಾಯುಗಳಲ್ಲಿ ಬಲವನ್ನು ತುಂಬುತ್ತದೆ. ಎಲುಬುಗಳಲ್ಲಿನ ಸಾಂದ್ರತೆ ಹೆಚ್ಚಾಗಿ ಅವು ಗಟ್ಟಿಗೊಳ್ಳುತ್ತವೆ.... ಇದರಿಂದ ಮೂಳೆ ಸವೆತದಂತಹ ತೊಂದರೆಗಳು ದೂರವಾಗುತ್ತವೆ..

ದೈನಂದಿನ ವ್ಯಾಯಾಮವು ಮೆದುಳಿನ ಕಾರ್ಯ ಚಟುವಟಿ-ಕೆಯನ್ನು, ತನ್ಮೂಲಕ ನೆನಪಿನ ಶಕ್ತಿಯನ್ನು ಹೆಚ್ಚಿಸುತ್ತದೆ... ಯೋಚನಾ ಶಕ್ತಿಯನ್ನು ವೃದ್ಧಿಸುವ ಜೊತೆ ಜೊತೆಗೆ ಗ್ರಹಿಕೆಯ ಶಕ್ತಿಯು ಕುಂದದೆ ಇರುವಂತೆ ಕಾರ್ಯನಿರ್ವಹಿಸುತ್ತದೆ.

ನಿಯಮಿತ ವ್ಯಾಯಾಮದಿಂದ ಒಳ್ಳೆಯ ನಿದ್ರೆಯನ್ನು ನಾವು ಪಡೆಯಬಹುದು. ಅತ್ಯುತ್ತಮವಾದ ದೈಹಿಕ ವ್ಯಾಯಾಮವು ಪದೇ ಪದೇ ಎಚ್ಚರವಾಗದ ನಿದ್ರೆಗೆ ದಾರಿಯಾಗುತ್ತದೆ. ನಿದ್ರೆಯ ಗುಣಮಟ್ಟವನ್ನು ಹೆಚ್ಚಿಸುವ ಜೊತೆಗೆ ನಿದ್ರಾಹೀನತೆಯ ತೊಂದರೆಯನ್ನು ನಿವಾರಿಸುತ್ತದೆ

ದೇಹದಲ್ಲಿ ಶಕ್ತಿ ಸಂಚಯವಾಗುತ್ತದೆ ಹಾಗೂ ದೇಹವು ಬಲಿಷ್ಠವಾಗುವ ಮೂಲಕ ದೈಹಿಕ ಸಾಮರ್ಥ್ಯವು ಹೆಚ್ಚುತ್ತದೆ ಹೃದಯದ ಸ್ನಾಯುಗಳು ಬಲಗೊಳ್ಳುತ್ತವೆ.

ಬಹಳಷ್ಟು ಬಾರಿ ನಮಗೆ ಯಾವ ವ್ಯಾಯಾಮಗಳನ್ನು ಎಷ್ಟು ಸಮಯದವರೆಗೆ ಮಾಡಬೇಕು ಎಂಬುದರ ಅರಿವು ಇರುವುದಿಲ್ಲ. ಯಾವುದೋ ಒಂದೆರಡು ವ್ಯಾಯಾಮಗಳು ಶೀಘ್ರ ತೂಕವನ್ನು ಇಳಿಸುತ್ತದೆ ಎಂದು ಅದೇ ವ್ಯಾಯಾಮಗಳನ್ನು ಮಾಡುವುದು ಕೂಡ ತಪ್ಪು. ಆ ರೀತಿ ತಪ್ಪು ಮಾಡದೆ ಇರಲು ವ್ಯಾಯಾಮದ ಕೆಲ ನಿಯಮಗಳನ್ನು ಅರಿತುಕೊಳ್ಳಬೇಕು.

ಏರೋಬಿಕ್ ಚಟುವಟಿಕೆ...... ವಾರಕ್ಕೆ ಕನಿಷ್ಠ 150 ನಿಮಿಷಗಳ ಮಧ್ಯಮದಿಂದ ಅತಿ ಬಿರುಸಿನ ನಡಿಗೆಯನ್ನು ಕೈಗೊಳ್ಳಿ. ಹಾಗೂ ಓಡುವುದಾದರೆ ವಾರಕ್ಕೆ ಸುಮಾರು 75 ನಿಮಿಷಗಳ ಓಟದ ಚಟುವಟಿಕೆಯನ್ನು ಕೈಗೊಳ್ಳಿ.

ಸ್ಟ್ರೆಂತ್ ಟ್ರೈನಿಂಗ್.... ಸ್ನಾಯಗಳ ಬಲವರ್ಧನೆಗೆ ಮಾಡುವ ವ್ಯಾಯಾಮಗಳು ವಾರದಲ್ಲಿ 2 ರಿಂದ 3 ದಿನ ದಿನ ಮಾಡಿದರೆ ಸಾಕು.

ದೇಹದ ನಮ್ಯತೆ ಮತ್ತು ಸಮತೋಲನವನ್ನು ಕಾಯ್ದುಕೊಳ್ಳಲು ಮಾಡುವ ಸ್ಟ್ರೆಚಿಂಗ್ ವ್ಯಾಯಾಮಗಳು ದೇಹದಲ್ಲಿ ಚಲನಶೀಲತೆಯನ್ನು ಉಂಟುಮಾಡುತ್ತದೆ. ಹಾಗೂ ಸಮತೋಲನವನ್ನು

ಕಾಯ್ದುಕೊಳ್ಳುವಂತೆ ಮಾಡುವ ಮೂಲಕ ಜೋಲಿ ತಪ್ಪುವ, ಬೀಳುವ ತೊಂದರೆಗಳಿಂದ ತಪ್ಪಿಸುತ್ತವೆ. ಯೋಗ ಮತ್ತು ತಾಯ್ ಚಿಯಂತಹ ವ್ಯಾಯಾಮಗಳು ಲಾಭದಾಯಕ.

ಎಲ್ಲಕ್ಕಿಂತ ಮುಖ್ಯವಾಗಿ ಪ್ರತಿದಿನ ವ್ಯಾಯಾಮ ನಡುಗೆಗಳನ್ನು ಮಾಡುವುದರಿಂದ ದೇಹಕ್ಕೆ ಹಾಗೂ ಮನಸ್ಸಿಗೆ ಸ್ಥಿರತೆ ದೊರೆಯುತ್ತದೆ. ಯಾವಾಗಲೋ ಒಮ್ಮೆ ದೀರ್ಘಕಾಲದವರೆಗೆ ವ್ಯಾಯಾಮಗಳನ್ನು ಮಾಡುವುದಕ್ಕಿಂತ ಪ್ರತಿದಿನ ಕನಿಷ್ಠ ಐದು ನಿಮಿಷಗಳ ವಾಕಿಂಗ್ ಮತ್ತು 10 ರಿಂದ 15 ನಿಮಿಷಗಳ ವ್ಯಾಯಾಮ ಮಾಡುವುದು ಸೂಕ್ತ.

ವ್ಯಾಯಾಮ ಮಾಡುವುದಕ್ಕೆ ನಿಯಮಗಳು ಇರುವಂತೆಯೇ ಏನು ಮಾಡಬಾರದು ಎಂಬುದಕ್ಕೂ ಕೂಡ ಕೆಲವು ನಿಯಮಗಳಿವೆ. ವ್ಯಾಯಾಮದಿಂದ ಹೆಚ್ಚಿನ ಲಾಭ ಮತ್ತು ತೊಂದರೆಗಳನ್ನು ಕಡಿಮೆಗೊಳಿಸಿಕೊಳ್ಳಲು ಇಂಗ್ಲೀಷ್ ವರ್ಣಮಾಲೆಯ ನಾಲ್ಕು ಖ ಗಳ ಚೌಕಟ್ಟು ಬೇಕೇ ಬೇಕು.

. ರೀ ಹೈಡ್ರೇಶನ್.... ವ್ಯಾಯಾಮ ಮಾಡುವಾಗ ದೇಹವು ಕಳೆದುಕೊಂಡ ನೀರಿನ ಅಂಶವನ್ನು ತುಂಬಲು ಸಾಕಷ್ಟು ಪ್ರಮಾಣದ ಎಲೆಕ್ಟ್ರೋಲೈಟ್ಗಳನ್ನು ಹೊಂದಿರುವ ನೀರನ್ನು ಹಾಗೂ ದ್ರವ ಆಹಾರವನ್ನು ಸೇವಿಸಬೇಕು.

ರೀಫ್ಯುಯಲ್.... ಪಿಷ್ಟ ಪದಾರ್ಥವನ್ನು ಸೇವಿಸುವ ಮೂಲಕ ದೇಹವು ಈಗಾಗಲೇ ಕಳೆದುಕೊಂಡಿರುವ ಸ್ನಾಯುಗಳಲ್ಲಿನ ಗ್ಲುಕೋಸ್ (ಮಸಲ್ ಗ್ಲೈಕೋಜನ್) ಪ್ರಮಾಣವನ್ನು ಮರು ಪೂರಣ ಮಾಡಿಕೊಳ್ಳಬೇಕು

ರಿಪೇರ್...ಅತ್ಯುತ್ತಮ ಗುಣಮಟ್ಟದ ಪ್ರೋಟೀನ್ ಗಳನ್ನು ಸೇವಿಸಬೇಕು ಆ ಮೂಲಕ ಸ್ನಾಯುಗಳ ಬಲವರ್ಧನೆಯನ್ನು ಮಾಡಿಕೊಳ್ಳಬೇಕು

ಹಾಗೂ ಅಂತಿಮವಾಗಿ

ರೆಸ್ಟ್..... ಎಲ್ಲ ವ್ಯಾಯಾಮಗಳಿಗೆ ಮೂಲವಾಗಿ ವಿಶ್ರಾಂತಿಯ ಅವಶ್ಯಕತೆ ಇರುತ್ತದೆ. ದೇಹದ ಎಲ್ಲಾ ಅಂಗಗಳು ಮತ್ತೆ ಕಾರ್ಯನಿರ್ವಹಿಸಲು ಅನು ವಾಗುವಂತೆ ಕಡ್ಡಾಯವಾಗಿ ವಿಶ್ರಾಂತಿಯನ್ನು ಪಡೆಯಲೇಬೇಕು ಉತ್ತಮ ಗುಣಮಟ್ಟದ ನಿದ್ರೆ ಮಾಡುವ ಮೂಲಕ ವಿಶ್ರಾಂತಿ ದೊರೆಯುತ್ತದೆ.

ಕೆಲವೊಮ್ಮೆ ಇಡೀ ದಿನದ ಒತ್ತಡವನ್ನು ಸಹಿಸಲು ಮಧ್ಯಾಹ್ನ 3 ರಿಂದ 5 ನಿಮಿಷಗಳ ಪವರ್ ನ್ಯಾಪ್ ತೆಗೆದುಕೊಳ್ಳುವುದು ಕೂಡ ಅತ್ಯವಶ್ಯಕವಾದ ವಿಶ್ರಾಂತಿ ಆಗಿರುತ್ತದೆ.

ವ್ಯಾಯಾಮವನ್ನು ಯಶಸ್ವಿಯಾಗಿ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಕೆಲ ಸಲಹೆಗಳು ಇಂತಿವೆ

ಈಗಾಗಲೇ ಸ್ಲೋ ಅಂಡ್ ಸ್ಟಡಿ ವಿನ್ಸ್ ದ ರೇಸ್ ಎಂಬ ಮೊಲ ಮತ್ತು ಆಮೆಯ ಕಥೆ ನಮಗೆ ಗೊತ್ತಿದೆ.

ಇದನ್ನೇ ನಾವು ವ್ಯಾಯಾಮಕ್ಕೆ ಅನ್ವಯಿಸಬಹುದು.

ಇದುವರೆಗೂ ನೀವು ಬದುಕಿನಲ್ಲಿ ವ್ಯಾಯಾಮವನ್ನೇ ಮಾಡಿಲ್ಲ ಎಂತಾದರೆ ಇದೀಗ ಸರಿಯಾದ ಸಮಯ.

ಹಗುರವಾದ ಆದರೆ ಅತ್ಯಂತ ಕಡಿಮೆ ಅವಧಿಯ ವ್ಯಾಯಾಮಗಳನ್ನು ನಿಧಾನವಾಗಿ ಮಾಡುತ್ತಾ ನಂತರ ಅದರ ತೀವ್ರತೆಯನ್ನು ಹೆಚ್ಚಿಸಿಕೊಳ್ಳಬಹುದು.

ಮಿಶ್ರ ವ್ಯಾಯಾಮಗಳನ್ನು ಮಾಡುವುದು... ಕೆಲವರಿಗೆ ಪ್ರತಿದಿನ ಒಂದೇ ರೀತಿಯ ಅಥವಾ ಒಂದೇ ಶೈಲಿಯ ವ್ಯಾಯಾಮಗಳನ್ನು ಮಾಡುವುದು ಬೇಸರ ತರಿಸಬಹುದು ಅಂತಹವರು ನಡಿಗೆ, ಈಜು, ಸೈಕ್ಲಿಂಗ್ ಮತ್ತು ನೃತ್ಯದಂತಹ ಚಟುವಟಿಕೆಗಳನ್ನು ತಮ್ಮ ದೈನಂದಿನ ಬದುಕಿನಲ್ಲಿ ಅಳವಡಿಸಿಕೊಳ್ಳಬಹುದು. ಈ ರೀತಿ ವ್ಯಾಯಾಮದಲ್ಲಿ ಮಾಡಿಕೊಳ್ಳುವ ಬದಲಾವಣೆಗಳು ಬೇಸರ ಹುಟ್ಟಿಸುವುದಿಲ್ಲ ಹಾಗೂ ಯಾವುದೇ ರೀತಿಯ ದೈಹಿಕ ತೊಂದರೆಗಳು ಉಂಟಾಗದಂತೆ ಕಾಯ್ದುಕೊಳ್ಳಲು ಅನುಕೂಲ ಸ್ನೇಹಿತರೆ, ನಾವೇನು ನೂರು ವರ್ಷ ಬದುಕುತ್ತೀವಾ?

ಇರುವಷ್ಟು ದಿನ ಉಂಡು ತಿಂದು ಹಾಯಾಗಿ ಇದ್ದರೆ ಆಯ್ತು ಎಂಬ ಭಾವ ನಿಮ್ಮದಾದರೆ ಕೊಂಚ ನನ್ನ ಮಾತನ್ನು ಕಿವಿಗೊಟ್ಟು ಕೇಳಿ. ಬದುಕಿರುವ ಕೆಲವೇ ವರ್ಷಗಳನ್ನಾದರೂ ಚಟುವಟಿ-ಕೆಯಿಂದ ಬದುಕಿದರೆ ರೋಗರುಜಿನಗಳಿಂದ ದೂರವಾದ, ಅನವಶ್ಯಕ ಬೊಜ್ಜನ್ನು ಹೊತ್ತು ತಿರುಗದ, ಮಾನಸಿಕ ತೊಂದರೆಗಳಿಂದ ಬಳಲದ ಬದುಕು ನಮ್ಮದಾಗುತ್ತದೆ.

ಬಹಳಷ್ಟು ಬಾರಿ ನಮ್ಮನ್ನು ಕಟ್ಟಿ ಹಾಕುವುದು ನಮ್ಮ ಜೀವನ ಶೈಲಿ. ಉಳಿದೆಲ್ಲ ವಿಷಯಗಳಿಗೆ ನಾವು ಸಮಯವನ್ನು ನೀಡುತ್ತೇವೆ ಆದರೆ ವ್ಯಾಯಾಮದ ವಿಷಯ ಬಂದಾಗ ಟೈಮೇ ಇಲ್ಲ ಸಮಯವೇ ಸಾಲುವುದಿಲ್ಲ, ನೋಡುತ್ತೀರಲ್ಲ ನಮ್ಮ ಬಿಜಿ ಲೈಫ್ ಎಂದೆಲ್ಲಾ ಹೇಳುತ್ತೇವೆ....ಆದರೆ ಒಂದೊಮ್ಮೆ ಕಾಯಿಲೆಗಳು ವಕ್ಕರಿಸಿದಾಗ ಒಮ್ಮಿಂದೊಮ್ಮೆಲೆ ಉಂಟಾಗುವ ತಡೆಗಿಂತ ಪ್ರತಿದಿನ ಕನಿಷ್ಠ ಅರ್ಧ ಗಂಟೆ ಸಮಯವನ್ನು ವ್ಯಾಯಾಮ ನಡಿಗೆಗಳಿಗೆ ಮೀಸಲಾಗಿದ್ದರೆ ದೈಹಿಕ ತೊಂದರೆಗಳಿಂದ ದೂರವಾಗಬಹುದು. ಊಟವಾದ ನಂತರ ಕೆಲವು ನಿಮಿಷಗಳ ನಡೆದಾಟ, ಲಿಫ್ಟ್ ಬಳಸುವ ಬದಲು ಮೆಟ್ಟಿಲುಗಳನ್ನು ಬಳಸುವುದು, ಮನೆಯ ಎಲ್ಲಾ ಕೆಲಸ ಕಾರ್ಯಗಳನ್ನು

ಹಂಚಿಕೊಂಡು ಮಾಡುವುದು ಹೀಗೆ ಹತ್ತು ಹಲವು ಕೆಲಸಗಳನ್ನು ಮಾಡುವ ಮೂಲಕ ಸದಾ ಚಟುವಟಿಕೆಯಿಂದ ಇರುವುದು ನಮಗೆ ನಾವು ಮಾಡಿಕೊಳ್ಳುವ ಬಹುದೊಡ್ಡ ಉಪಕಾರ.

ಇಂದಿನ ಆಧುನಿಕ ಜೀವನ ಶೈಲಿಯಲ್ಲಿ ಕಣ್ಣಿಗೆ ಕಂಡದ್ದನ್ನೆಲ್ಲ ತಿನ್ನುವ ನಾವು ದಿನಚರಿ ಹಾಗೂ ಋತುಚರ್ಯಗಳಿಗೆ ಹೊಂದಿಕೊಂಡಿರದೆ ಹೋದರೆ ಆಗುವ ಪರಿಣಾಮಗಳನ್ನು ಖಂಡಿತವಾಗಿಯೂ ಎದುರಿಸಬೇಕು.

ಉಗುರಿನಿಂದ ಹೋಗುವುದಕ್ಕೆ ಕೊಡಲಿ ಏಕೆ ಬೇಕು ಎಂಬ ಮಾತು ಕೇಳಿದ್ದೀರಲ್ಲವೇ ?

ದೈನಂದಿನ ವ್ಯಾಯಾಮ ನಮ್ಮ ದೇಹಕ್ಕೆ ಆಮ್ಲಜನಕದಂತೆ ಕಾರ್ಯನಿರ್ವಹಿಸಿದರೆ ಬದುಕು ಬಂಗಾರವಾಗುತ್ತದೆ. ಉತ್ತಮವಾದ ಬದುಕನ್ನು ನಿರ್ವಹಿಸಲು ವ್ಯಾಯಾಮ ಮತ್ತು ನಡಿಗೆಗಳನ್ನು ನಿಮ್ಮ ಬದುಕಿನ ಭಾಗವನ್ನಾಗಿಸಿ...... ಯೋಚಿಸಿ, ಯೋಜಿಸಿ ಹಾಗೂ ಅಳವಡಿಸಿಕೊಳ್ಳಿ.



ವೀಣಾ ಹೇಮಂತ್ ಗೌಡ ಪಾಟೀಲ್

1ನೇ ಪುಟದಿಂದ....

## ಕೃಷಿ ಅಂಕಿ-ಅಂಶಗಳ ನಿಖರತೆಗೆ ಇಲಾಖೆಗಳ ನಡುವೆ ಸಮನ್ವಯತೆ ಅತ್ಯಗತ್ಯ: ಜಿಲ್ಲಾಧಿಕಾರಿ ಸೂಚನೆ

ಗದಗ ಜಿಲ್ಲೆಯ ಋತುವಾರು ಮೂರು ವರ್ಷಗಳ ಬೆಳೆ ಒಟ್ಟು ಕ್ಷೇತ್ರ ಮತ್ತು ನೀರಾವರಿ ಕ್ಷೇತ್ರಗಳ ವಿವರ (ಹೆಕ್ಟೇರ್‌ಗಳಲ್ಲಿ): ಜಿಲ್ಲೆಯ ಒಟ್ಟು ಬಿತ್ತನೆ ಕ್ಷೇತ್ರವು 2024-25ರಲ್ಲಿ ಗರಿಷ್ಠ ಮಟ್ಟಕ್ಕೆ ತಲುಪಿದ್ದು, 2025-26ರಲ್ಲಿ ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ಸ್ಥಿರತೆ ಕಾಯ್ದುಕೊಂಡಿದೆ. ಒಟ್ಟು ಕ್ಷೇತ್ರವು (2025-26): ಮುಂಗಾರು ಹಂಗಾಮಿನಲ್ಲಿ 3,41,579 ಹೆಕ್ಟೇರ್, ಹಿಂಗಾರು ಹಂಗಾಮಿನಲ್ಲಿ 2,44,198 ಹೆಕ್ಟೇರ್ ಸೇರಿ ಒಟ್ಟು 5,85,777 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ನೀರಾವರಿ ಕ್ಷೇತ್ರ (2025-26): ಪ್ರಸಕ್ತ ಸಾಲಿನಲ್ಲಿ ಮುಂಗಾರಿನಲ್ಲಿ 60,442 ಹೆಕ್ಟೇರ್ ಹಾಗೂ ಹಿಂಗಾರಿನಲ್ಲಿ 57,749 ಹೆಕ್ಟೇರ್ ಸೇ-ರಿದಂತೆ ಒಟ್ಟು 1,18,191 ಹೆಕ್ಟೇರ್ ಪ್ರದೇಶ ನೀರಾವರಿ ಸೌಲಭ್ಯ ಒಳಗೊಂಡಿದೆ. ಮುಂಗಾರು ಹಂಗಾಮಿನ ಪ್ರಮುಖ ಬೆಳೆಗಳ ವಿವರ (2025-26): ಜಿಲ್ಲೆಯ ?ಮುಂಗಾರು ಹಂಗಾಮಿನಲ್ಲಿ ಋತುವಿನ ಕೃಷಿ, ತೋಟಗಾರಿಕೆ ಹಾಗೂ ರೇಷ್ಮೆ ಬೆಳೆಗಳ ಕ್ಷೇತ್ರವಾರು ವಿವರ ಹೀಗಿದ್ದು, ಕೃಷಿ ಬೆಳೆಗಳಾದ ಮೆಕ್ಕೆಜೋಳವು ಮುಂಚೂಣಿಯಲ್ಲಿದ್ದು 1,54,216 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿದೆ. ಹೆಸರು 1,06,145 ಹೆಕ್ಟೇರ್, ಶೇಂಗಾ 10,322 ಹೆಕ್ಟೇರ್, ಹತ್ತಿ 6,664 ಹೆಕ್ಟೇರ್ ಹಾಗೂ ಸೂರ್ಯಕಾಂತಿ 3,278 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಹಿಂಗಾರು ಹಂಗಾಮಿನ ಪ್ರಮುಖ ಬೆಳೆಗಳ ವಿವರ (2025-26): ಜಿಲ್ಲೆಯ ಹಿಂಗಾರು ಹಂಗಾಮಿನಲ್ಲಿ ಋತುವಿನ ಕೃಷಿ, ತೋಟಗಾ-ರಿಕೆ ಹಾಗೂ ರೇಷ್ಮೆ ಬೆಳೆಗಳ ಕ್ಷೇತ್ರವಾರು ವಿವರ ಹೀಗಿದ್ದು, ಹಿಂಗಾರು ಹಂಗಾಮಿನಲ್ಲಿ ಕಡಲೆ ಮತ್ತು ಗೋಧಿ ಪ್ರಮುಖ ಕೃಷಿ ಬೆಳೆಗಳಾಗಿ ಹೊರಹೊಮ್ಮಿವೆ. ಕೃಷಿ ಬೆಳೆಗಳಾದ ಕಡಲೆ ಬರೋಬ್ಬರಿ 1,57,903 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗುವ ಮೂಲಕ ಅತಿ ದೊಡ್ಡ ಬೆಳೆಯಾಗಿದೆ. ಜೋಳ 22,172 ಹೆಕ್ಟೇರ್, ಗೋಧಿ 19,500 ಹೆಕ್ಟೇರ್, ಸೂರ್ಯಕಾಂತಿ 14,755 ಹೆಕ್ಟೇರ್ ಹಾಗೂ ಮೆಕ್ಕೆಜೋಳ 3,287 ಹೆಕ್ಟೇರ್ ಪ್ರದೇಶದಲ್ಲಿ ದಾಖಲಾಗಿದೆ. ಸಭೆಯಲ್ಲಿ ಕೃಷಿ ಇಲಾಖೆಯ ವಿವಿಧ ಯೋಜನೆಗಳು, ಬೆಳೆ ಸಮೀಕ್ಷೆ, ಬೆಳೆ ಕಟಾವು ಪ್ರಯೋಗಗಳು ಹಾಗೂ ರೈತರ ಭೂಹಿಡುವಳಿ ಮಾಹಿತಿ ಸೇರಿದಂತೆ ಪ್ರಮುಖ ವಿಷಯಗಳ ಕುರಿತು ವಿಸ್ತೃತವಾಗಿ ಚರ್ಚಿಸಲಾಯಿತು. ಈ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ. ದುರಗೇಶ್ ಕೆ. ಆರ್, ನಗರಾಭಿರುದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೊಟೂರು, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಎ.ಎ. ಕಂಬಾಳಿಮಠ, ಭೂ ದಾಖಲೆ ಇಲಾಖೆಯ ಉಪನಿರ್ದೇಶಕ ರುದ್ರಣ್ಣಗೌಡ ಜಿ. ಜೆ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಕುಡಿಯುವ ನೀರು, ವಿದ್ಯುದೀಪ ದುರಸ್ಥಿಗೆ ಆಗ್ರಹಿಸಿ ಎತ್ತು,ಆಕಳ ಸಮೇತ ಪ್ರತಿಭಟನೆ

ಲಕ್ಷ್ಮೇಶ್ವರ : ಕೆಂಚಲಾಪುರ ಬನಶಂಕರಿ ಬಡಾವಣೆ ಭಜಂತ್ರಿ ಓಣಿ, 3ನೇ ವಾರ್ಡ ಸೇರಿದಂತೆ ವಿವಿಧ ವಾರ್ಡಗಳ ಸಾರ್ವಜನಿಕರಿಂದ ಪ್ರತಿಭಟನೆ ನಡೆಸಲಾಯಿತು.

ಸಮಗ್ರ ರೈತಪರ ಒಕ್ಕೂಟ ಅಧ್ಯಕ್ಷ ಮಂಜುನಾಥ. ಮಾಗಡಿ ಹಾಗೂ ನಾಗರಾಜ ಚಿಂಚಲಿ ನೇತೃತ್ವದಲ್ಲಿ ನಡೆದ ಈ ಪ್ರತಿಭಟನೆಯಲ್ಲಿ 2 ತಿಂಗಳಿನಿಂದ ಕುಡಿಯುವ ನೀರು ಗೌರವ ಘಟಕ ದುರಸ್ಥಿಕಾರ್ಯ ಬೀದಿ ದೀಪ ಮೂಲಭೂತ ಸೌಕರ್ಯ ಸಲುವಾಗಿ ಪ್ರತಿಭಟನೆ ಮಾಡಲಾಗುತ್ತಿದೆ. ಕೆಂಚಲಾಪುರ ಓಣಿಯಿಂದ ಪೊರಕೆ,ಚರಗಿ,ಕೊಡಪಾನ್, ಎತ್ತು ಆಕಳು ಮೇಕೆ ಜೊತೆಗೆ ಬಜಾರ ಮಾರ್ಕೆಟನಿಂದ ಪುರಸಭೆ ಮುತ್ತಿಗೆ ಹಾಕಿ ಆಕ್ರೋಶವ್ಯಕ್ತಪಡಿಸಿದರು. ಎತ್ತು ಆಕಳು ಪುರಸಭೆ ಒಳಗಡೆ ತಂದ ಪ್ರತಿಭಟನೆ ಕಾರರು ಇದಕ್ಕೆ ಪೋಲಿಸರು ಮತ್ತು ಪ್ರತಿಭಟನೆ ಕಾರರೊಂದಿಗೆ ಮಾತಿನ ಚಕಮುಖಿ ನಡೆಯಿತು. ಹೋರಾಟ ಸ್ಥಳಕ್ಕೆ ಕುಂದಗೋಳ ಬಸವಣ್ಣ ಶ್ರೀಗಳು, ದುಮ್ಮವಾಡದ ಸರ್ಪಭೂಷಣ ಶ್ರೀಗಳು ಆಗಮಿಸಿ ಬೆಂಬಲ ಸೂಚಿಸಿದರು.

## ಬಿಡದಿ ಟೌನ್‌ಶಿಪ್ ಡಿಪಿಆರ್‌ಗೆ ಸಿದ್ಧತೆ

ಬೆಂಗಳೂರು: ಬಿಡದಿ ಟೌನ್‌ಶಿಪ್ ಯೋಜನೆ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆ, ರೈತರ ಪ್ರತಿಭಟನೆ, ಆರೋಪ-ಪ್ರತ್ಯಾರೋಪಗಳ ನಡು ವೆಯೂ ಗ್ರೇಟರ್ ಬೆಂಗಳೂರು ಇಂಟಿಗ್ರೇಟೆಡ್ ಟೌನ್ ಶಿಪ್ (ಜಿಬಿಐಟಿ) ಡಿಪಿಆರ್ ಸಿದ್ಧಪಡಿಸಲು ಮುಂದಾಗಿದೆ.




ಯೋಜನೆಯ ಸಮಗ್ರ ವಿವರವಾದ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು ಸುಮಾರು 26 ಕೋಟಿ ವೆಚ್ಚದ ಟೆಂಡರ್ ಕರೆಯಲು ಜಿಬಿಐಟಿ ತೀರ್ಮಾನಿಸಿದೆ. ಟೆಂಡರ್ ಪ್ರಕ್ರಿಯೆಯ ಭಾಗವಾಗಿ ಜೂನ್ 22ರಂದು ಟೆಂಡರ್ ತೆರೆಯಲಾಗುವುದು. ಅಲ್ಲಿ ಆಯ್ಕೆಯಾಗುವ ಸಂಸ್ಥೆಗೆ ಟೌನ್‌ಶಿಪ್‌ನ ಸಮಗ್ರ ರೂಪುರೇಷೆ ಸಿದ್ಧಪಡಿಸುವ ಜವಾಬ್ದಾರಿ ವಹಿಸಲಾಗುತ್ತದೆ. ಡಿಪಿಆರ್‌ನಲ್ಲಿ ಏನೆಲ್ಲ ಇರಲಿದೆ?ಟೆಂಡರ್ ಪಡೆಯುವ ಸಂಸ್ಥೆಯು ಟೌನ್‌ಶಿಪ್‌ನ ಸಂಪೂರ್ಣ ಬ್ಲೂಪ್ರಿಂಟ್, ಮಾಸ್ಟರ್ ಪ್ಲಾನ್ ಹಾಗೂ ರೋಡ್‌ಮ್ಯಾಪ್ ಸಿದ್ಧಪಡಿಸಬೇಕು. ಇದರ ಜೊತೆಗೆ,ಟೌನ್‌ಶಿಪ್ ಅನುಷ್ಠಾನದ ಕಾರ್ಯತಂತ್ರ,ರಸ್ತೆ, ನೀರು, ಒಳಚರಂಡಿ, ವಿದ್ಯುತ್ ಸೇರಿದಂತೆ ಮೂಲಭೂತ ಸೌಲಭ್ಯಗಳ ಯೋಜನೆ,ಸಾಮಾಜಿಕ ಹಾಗೂ ನಾಗರಿಕ ಸೌಲಭ್ಯಗಳ ವಿವರ,ಹೂಡಿಕೆ ಮಾದರಿ ಹಾಗೂ ಹಣಕಾಸಿನ ವ್ಯವಸ್ಥೆ,ಯೋಜನೆ ಜಾರಿಗೆ ಸಂಬಂಧಿಸಿದ ಹಂತವಾರು ಕಾರ್ಯಯೋಜನೆಇತ್ಯಾದಿ ಅಂಶಗಳನ್ನು ಒಳಗೊಂಡ ಸಮಗ್ರ ವರದಿ ಸಲ್ಲಿಸಬೇಕಿದೆ. ಒಂದೆಡೆ ರೈತರ ಪ್ರತಿಭಟನೆ ಹಾಗೂ ರಾಜಕೀಯ ಜಟಾಪಟಿ ಮುಂದುವ-ರಿದಿದ್ದರೂ, ಮತ್ತೊಂದೆಡೆ ಆಡಳಿತಾತ್ಮಕವಾಗಿ ಯೋಜನೆಗೆ ವೇಗ ನೀಡುವ ಉದ್ದೇಶದಿಂದ ಜಿಬಿಐಟಿ ಡಿಪಿಆರ್ ಪ್ರಕ್ರಿಯೆ ಆರಂಭಿಸಿರುವುದು ಮಹತ್ವದ ಬೆಳವಣಿಗೆಯಾಗಿದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಆಯ್ಕೆಯಾಗುವ ಸಲಹಾ ಸಂಸ್ಥೆ ಸಲ್ಲಿಸುವ ವರದಿಯ ಆಧಾರದ ಮೇಲೆ ಬಿಡದಿ ಟೌನ್‌ಶಿಪ್‌ನ ಅಂತಿಮ ವಿನ್ಯಾಸ ಹಾಗೂ ಅನುಷ್ಠಾನದ ದಿಕ್ಕು ಸ್ಪಷ್ಟವಾಗಲಿದೆ.

# ಜನನ-ಮರಣ ನೋಂದಣಿಯಲ್ಲಿ ವಿಳಂಬ ಸಹಿಸಲಾಗದು : ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಕಟ್ಟುನಿಟ್ಟಿನ ಸೂಚನೆ

ಗದಗ: ಜನನ ಮತ್ತು ಮರಣ ನೋಂದಣಿ ಪ್ರಕ್ರಿಯೆಯನ್ನು ಸಮಯೋಚಿತವಾಗಿ ಹಾಗೂ ದೋಷರಹಿತವಾಗಿ ನಡೆಸುವುದು ಅತ್ಯಂತ ಮಹತ್ವದ್ದಾಗಿದ್ದು, ಯಾವುದೇ ಕಾರಣಕ್ಕೂ ವಿಳಂಬ ನೋಂದಣಿಗೆ ಅವಕಾಶ ನೀಡಬಾರದು ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಅಧಿಕಾ-ರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಜಿಲ್ಲಾಡಳಿತ ಭವನದಲ್ಲಿ ಬುಧವಾರ ನಡೆದ ಜನನ-ಮರಣ ನೋಂದಣಿ ಪದ್ಧತಿಯ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಪ್ರಗತಿ ಪರಿಶೀಲನೆ ನಡೆಸಿದರು. ಸಭೆಯಲ್ಲಿ ಮಾತನಾಡಿದ ಜಿಲ್ಲಾಧಿಕಾರಿಗಳು, ಜಿಲ್ಲೆಯ ಎಲ್ಲ ಸರ್ಕಾರಿ ಆಸ್ಪತ್ರೆಗಳ ಜನನ-ಮರಣ ನೋಂದಣಿ ವೈದ್ಯಾಧಿಕಾರಿಗಳು ಕಡ್ಡಾಯವಾಗಿ ಡಿಜಿಟಲ್ ಕೀ (ಅರುಣಚಿಟ ಏಜಥಿ) ಹೊಂದಿರಬೇಕು. ಈ ವಿಷಯದಲ್ಲಿ ಯಾವುದೇ ವಿನಾಯಿತಿ ಅಥವಾ ಕಾರಣಗಳನ್ನು ಒಪ್ಪಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಜನನ ಮತ್ತು ಮರಣ ನೋಂದಣಿ ಸರಿಯಾದ ಸಂದರ್ಭದಲ್ಲಿ ಹಾಗೂ ನಿಗದಿತ ಅವಧಿಯೊಳಗೆ ನಡೆಯುವಂತೆ ಅಗತ್ಯ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ನೋಂದಣಿ ಪ್ರಕ್ರಿಯೆಯಲ್ಲಿ ಎದುರಾಗುತ್ತಿರುವ ಅಡೆತಡೆಗಳನ್ನು ಸಭೆಯ ಗಮನಕ್ಕೆ ತಂದು ಅವುಗಳಿಗೆ ಶೀಘ್ರ ಪರಿಹಾರ ಕಂಡುಕೊಳ್ಳುವ ಮೂಲಕ ಪ್ರಗತಿ ಸಾಧಿಸಬೇಕು ಎಂದು ಸೂಚಿಸಿದರು.

ನೋಂದಣಿ ಕಾರ್ಯದಲ್ಲಿ ನಿರೀಕ್ಷಿತ ಪ್ರಗತಿ ಕಾಣದಿದ್ದರೆ ಅದಕ್ಕೆ ಸಂಬಂಧಿಸಿದ



ಅಧಿಕಾರಿಗಳೇ ಹೊಣೆಗಾರರಾಗಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ ಜಿಲ್ಲಾಧಿಕಾರಿಗಳು, ಜನನ ಮತ್ತು ಮರಣ ನೋಂದಣಿಯು ಮುಂದಿನ ದಿನಗಳಲ್ಲಿ ನಾಗರಿಕ-ರಿಗೆ ಅಗತ್ಯವಾಗುವ ವಿವಿಧ ದಾಖಲೆಗಳು, ಸರ್ಕಾರಿ ಸೌಲಭ್ಯಗಳು ಹಾಗೂ ಕಾನೂನು ಪ್ರಕ್ರಿಯೆಗಳಿಗೆ ಮೂಲ ಆಧಾರವಾಗಿರುವುದ-ರಿಂದ ಈ ಕಾರ್ಯದಲ್ಲಿ ನಿರ್ಲಕ್ಷ್ಯಕ್ಕೆ ಅವಕಾಶವಿಲ್ಲ ಎಂದು ಜಿಲ್ಲಾಧಿಕಾರಿ ಸಿ ಎನ್ ಶ್ರೀಧರ ಪುನರುಚ್ಚರಿಸಿದರು. ಸಭೆಯಲ್ಲಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಬಿ ಎಸ್ ಪಾಟೀಲ ಮಾಹಿತಿ ನೀಡಿ, ಜಿಲ್ಲೆಯಲ್ಲಿನ 2 ಆಸ್ಪತ್ರೆಗಳು ನಿಗದಿತ ಅವಧಿಯೊಳಗೆ ಜನನ-ಮರಣ ನೋಂದಣಿ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಿ ಉತ್ತಮ ಸಾಧನೆ ತೋರಿವೆ ಎಂದು ತಿಳಿಸಿದರು. ಇತರೆ ಆಸ್ಪತ್ರೆಗಳೂ ಇದೇ ಮಾದ-ರಿಯನ್ನು ಅನುಸರಿಸಿ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಳ್ಳಬೇಕು ಎಂದು ಹೇಳಿದರು.

ಜನವರಿ ಯಿಂದ ಮೇ 2026ರ ಅಂತ್ಯದ ಅಂಕಿಅಂಶಗಳ ಪ್ರಕಾರ ಜಿಲ್ಲೆಯಲ್ಲಿ ಒಟ್ಟು 6,994 ಜನನ ಪ್ರಕರಣಗಳು ದಾಖಲಾಗಿದ್ದು, ಅವುಗಳಲ್ಲಿ 5,090 (72.78%) ಪ್ರಕರಣಗಳು ನಿಗದಿತ ಅವಧಿಯೊಳಗೆ ನೋಂದಣಿಯಾಗಿವೆ. ತಾಲೂಕುವಾರು ಪರಿಶೀಲನೆಯಲ್ಲಿ ಗದಗ ತಾಲೂಕು 76.43% ಹಾಗೂ ಮುಂಡರಗಿ ತಾಲೂಕು 76.56% ಸಮಯೋಚಿತ ನೋಂದಣಿಯೊಂದಿಗೆ ಉತ್ತಮ ಸಾಧನೆ ಮಾಡಿವೆ. ಶಿರಹಟ್ಟಿ ತಾಲೂಕು 73.68%, ಲಕ್ಷ್ಮೇಶ್ವರ 75.79% ಮತ್ತು ನರಗುಂದ 73.56% ಪ್ರಗತಿ ದಾಖಲಿಸಿವೆ. ರೋಣ ತಾಲೂಕು 47.11% ಸಾಧನೆಯೊಂದಿಗೆ ಹಿಂದುಳಿದಿದೆ ಎಂದು ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ ಒಟ್ಟು 3,872 ಮರಣ ಪ್ರಕರಣಗಳು ದಾಖಲಾಗಿದ್ದು, ಅವುಗಳಲ್ಲಿ 2,830 (73.09%) ಪ್ರಕರಣಗಳು ನಿಗದಿತ ಅವಧಿಯೊಳಗೆ ನೋಂದಣಿಯಾಗಿವೆ. ತಾಲೂಕುವಾರು ಪರಿಶೀಲನೆಯಲ್ಲಿ ಗದಗ ತಾಲೂಕು 71.68% ಹಾಗೂ ಮುಂಡರಗಿ ತಾಲೂಕು 73.77%, ಶಿರಹಟ್ಟಿ ತಾಲೂಕು 79.51%, ಲಕ್ಷ್ಮೇಶ್ವರ 68.47% ಮತ್ತು ನರಗುಂದ 73.63%, ರೋಣ ತಾಲೂಕು 69.91% ಪ್ರಗತಿ ಸಾಧನೆ ಮಾಡಿವೆ. ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ. ದುರಗೇಶ್ ಕೆ.ಆರ್., ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಎ.ಎ. ಕಂಬಾಳಿಮಠ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೊಟೂರ, ಭೂದಾಖಲೆಗಳ ಉಪನಿರ್ದೇಶಕ ರುದ್ರಣ್ಣಗೌಡ ಜಿ.ಜೆ., ವಾರ್ತಾಧಿಕಾರಿ ವಸಂತ ಮಡ್ಲೂರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಎಸ್. ನೀಲಗುಂದ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ರಾಧಾ ಮಣ್ಣೂರ, ಆನಂದ ಬದಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

> **"ಜನನ ಮತ್ತು ಮರಣ ನೋಂದಣಿ ಪ್ರಕ್ರಿಯೆಯನ್ನು ಸಮಯೋಚಿತವಾಗಿ ಹಾಗೂ ದೋಷರಹಿತವಾಗಿ ನಡೆಸುವುದು ಅತ್ಯಂತ ಮಹತ್ವದ್ದಾಗಿದೆ. ಯಾವುದೇ ಕಾರಣಕ್ಕೂ ವಿಳಂಬ ನೋಂದಣಿಗೆ ಅವಕಾಶ ನೀಡಬಾರದು. ಎಲ್ಲಾ ಸರ್ಕಾರಿ ಆಸ್ಪತ್ರೆಗಳ ನೋಂದಣಿ ವೈದ್ಯಾಧಿಕಾರಿಗಳು ಕಡ್ಡಾಯವಾಗಿ ಡಿಜಿಟಲ್ ಕೀ ಹೊಂದಿರಬೇಕು. ನೋಂದಣಿ ಕಾರ್ಯದಲ್ಲಿ ನಿರೀಕ್ಷಿತ ಪ್ರಗತಿ ಕಾಣದಿದ್ದರೆ ಸಂಬಂಧಿಸಿದ ಅಧಿಕಾರಿಗಳೇ ಹೊಣೆಗಾರರಾಗುತ್ತಾರೆ."**
>
> ಸಿ.ಎನ್. ಶ್ರೀಧರ, ಜಿಲ್ಲಾಧಿಕಾರಿ, ಗದಗ

# 2ನೇ ಹಂತದ ಸಂಪುಟ ವಿಸ್ತರಣೆಯಲ್ಲಿ ಮಂತ್ರಿಯಾಗಲು ಬೆಂಬಲಿಗರ ಮೂಲಕ ಸಚಿವಾಕಾಂಕ್ಷಿಗಳ ಒತ್ತಡ

ಬೆಂಗಳೂರು: ಮುಂದಿನವಾರದ ಒಳಗಾಗಿ ಸಚಿವ ಸಂಪುಟ 2ನೇ ಹಂತದ ವಿಸ್ತರಣೆ ಸಾಧ್ಯತೆಯಿರುವುದರಿಂದ ಸಚಿವಾಕಾಂಕ್ಷಿಗಳು ಬೆಂಬಲಿಗರ ಮೂಲಕ ಪ್ರತಿಭಟನೆ ನಡೆಸಿ ಒತ್ತಡ ಹೇರುವ ಪ್ರಯತ್ನ ನಡೆಸಿದ್ದಾರೆ. ದಿನೇ ದಿನೇ ಸಚಿವ ಸ್ಥಾನದ ಆಕಾಂಕ್ಷಿಗಳ ಒತ್ತಡ, ಪ್ರತಿಭಟನೆ ತೀವ್ರಗೊಳ್ಳುತ್ತಿದೆ. ಮೊದಲ ಹಂತದಲ್ಲಿ ಸಚಿವ ಸ್ಥಾನ ವಂಚಿತ ಹಲವು ಹಿರಿಯ ನಾಯಕರು ಒಳಗೊಳಗೆ ತಮ ಅಸಮಾಧಾನವನ್ನು ನುಂಗಿಕೊಂಡು 2ನೇ ಹಂತದ ವಿಸ್ತರಣೆಯಲ್ಲಿ ಅವಕಾಶ ಸಿಗಬಹುದು ಎಂಬ ನಿರೀಕ್ಷೆಯಲ್ಲಿದ್ದಾರೆ.

ಸಂಪುಟದಲ್ಲಿ ಈವರೆಗೂ 14 ಮಂದಿ ಸಚಿವರಿಗೆ ಮಾತ್ರ ಅವಕಾಶ ಸಿಕ್ಕಿದೆ. ಬಾಕಿಯಿರುವ 20 ಸ್ಥಾನಗಳ ಭರ್ತಿಗೆ ಜೂನ್ 23 ಅಥವಾ 25 ರಂದು 2ನೇ ಹಂತದಲ್ಲಿ ಸಂಪುಟ ವಿಸ್ತರಣೆಯಾಗಲಿದೆ ಎಂದು ಹಿರಿಯ ನಾಯಕ ಟಿ.ಬಿ.ಜಯಚಂದ್ರ ಹೇಳಿದ್ದಾರೆ. ಅದೇ ನಿರೀಕ್ಷೆಯಲ್ಲಿ ಶಾಸಕರು ಲಾಬಿ ಆರಂಭಿಸಿದ್ದಾರೆ. ಮೊದಲಿಗೆ ಜಮೀರ್ ಅಹಮದ್ ಖಾನ್ ಬೆಂಬಲಿಗರು ಬೆಂಗಳೂರಿನ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಪ್ರತಿಭಟನೆ ನಡೆಸಿ, ಸಚಿವ ಸ್ಥಾನ ನೀಡಲು ಆಗ್ರಹಿಸಿದ್ದರು. ಬಹಳಷ್ಟು ಮಂದಿ ಮಾಜಿ ಸಚಿವರು, ಹಿರಿಯ ನಾಯಕರು ಪಕ್ಷದ ವಿರುದ್ಧ ಪ್ರತಿಭಟನೆ ಬೇಡ ಎಂದು ಸಂಧಾನ ಹಾಗೂ ಪ್ರಾರ್ಥನೆ ಮಾರ್ಗ ಹಿಡಿದಿದ್ದಾರೆ. ಆದರೆ ಮೊಟ್ಟ ಮೊದಲಿಗೆ ಜಮೀರ್ ಅವರು ಪ್ರತಿಭಟನೆ ಮಾರ್ಗ ಹಿಡಿಯುವ ಮೂಲಕ ಸೆಡ್ಡು ಹೊಡೆದಿದ್ದಾರೆ. ಆದರೆ ಅದು ಪ್ರಯೋಜನಕ್ಕೆ ಬಂದಂತೆ ಕಾಣುತ್ತಿಲ್ಲ. ನಿರಂತರವಾಗಿ ಮೂರ್ನಾಲ್ಕು ದಿನ ಪ್ರತಿಭಟನೆ ನಡೆಸಿದ ಜಮೀರ್ ಬೆಂಬಲಿಗರು ಹಿರಿಯ ನಾಯಕರನ್ನು ಭೇಟಿ ಮಾಡಿ ಮನವಿ ಮಾಡಿದ್ದರು.

ತಮ ಹಾಗೂ ಪಕ್ಷದ ವಿರುದ್ಧ ಕೆಲಸ ಮಾಡಿದ ವ್ಯಕ್ತಿಗೆ ಸಚಿವ ಸ್ಥಾನ ಕೊಡಿಸಬೇಕೇ? ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ ಬಳಿಕ ಜಮೀರ್ ಬೆಂಬಲಿಗರು ತಣ್ಣಗಾಗಿದ್ದಾರೆ. ಬೆಳಗಾವಿ ಜಿಲ್ಲೆಯ ಅಥಣಿ ಕ್ಷೇತ್ರದ ಶಾಸಕ ಲಕ್ಷ್ಮಣ ಸವದಿ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಬೆಂಬಲಿಗರು ಪ್ರತಿಭಟನೆ ನಡೆಸಿದ್ದಾರೆ. ವಿಜಯಪುರ ಜಿಲ್ಲೆಯ ನಾಗಾ ಠಾಣಾ ಬಸ್ ನಿಲ್ದಾಣದಲ್ಲಿ ನೂರಾರು ಸಂಖ್ಯೆಯ ಬೆಂಬಲಿಗರು ಧರಣಿ ನಡೆಸಿದ್ದು, ಲಕ್ಷ್ಮಣ ಸವದಿಯವರಿಗೆ ಸಚಿವ ಸ್ಥಾನ ನೀಡಲೇ ಬೇಕು ಎಂದು ಆಗ್ರಹಿಸಿದ್ದರು. ವಿಜಯಪುರ ಜಿಲ್ಲೆಯ ಇಂಡಿ ಕ್ಷೇತ್ರದ ಶಾಸಕ ಯಶವಂತರಾಯ ಗೌಡ ಪಾಟೀಲ ಅವರ ಬೆಂಬಲಿಗರು ನಿನ್ನೆ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿ, ಸಚಿವ ಸ್ಥಾನ ದೊರೆಯದೇ ಇದ್ದರೆ ಪದಾಧಿಕಾರಿಗಳು ಕಾಂಗ್ರೆಸ್ ಪಕ್ಷಕ್ಕೆ ಸಾಮೂಹಿಕ ರಾಜೀನಾಮೆ ನೀಡುತ್ತೇವೆ, ರಾಜ್ಯಾದ್ಯಂತ ಪ್ರತಿಭಟನೆ ನಡೆಸುತ್ತೇವೆ ಎಂದು ಎಚ್ಚರಿಕೆ ನೀಡಿದ್ದಾರೆ. ಇಂದು ಕೊಪ್ಪಳ ಜಿಲ್ಲೆಯ ಯಲಬುರ್ಗಾ ಕ್ಷೇತ್ರದಲ್ಲಿ ಶಾಸಕ ಬಸವರಾಜರಾಯ ರೆಡ್ಡಿ ಅವರ ಬೆಂಬಲಿಗರು ಸಚಿವ ಸ್ಥಾನ ನೀಡುವಂತೆ ಪೂಜೆ, ಪ್ರಾರ್ಥನೆಗಳ ಮೊರೆ ಹೋಗಿದ್ದಾರೆ. ರಾಯರೆಡ್ಡಿ ಈ ಹಿಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಆರ್ಥಿಕ ಸಲಹೆಗಾರರಾಗಿ ಸಚಿವ ಸಂಪುಟ ದರ್ಜೆಯ ಸ್ಥಾನಮಾನ ಅನುಭವಿಸಿದ್ದರು. ಸಿದ್ದರಾಮಯ್ಯ ಅವರ ನಾಯಕತ್ವದ ಬದಲಾವಣೆಗೆ ಪ್ರಬಲ ವಿರೋಧ ವ್ಯಕ್ತಪಡಿಸಿದ್ದರು. ಶಾಸಕಾಂಗ ಪಕ್ಷದ ಸಭೆಯಲ್ಲೇ ಸಿದ್ದರಾಮಯ್ಯ ಅವರ



ಆಯ್ಕೆಯಾಗಿದೆ. ಬದಲಾವಣೆಗೂ ಶಾಸಕಾಂಗ ಸಭೆಯಲ್ಲೇ ನಿರ್ಧಾರವಾಗಬೇಕು. ಕಾಂಗ್ರೆಸ್ ಹೈಕಮಾಂಡ್ ಏಕಾಏಕಿ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದರು. ಆದರೆ ರಾಯರೆಡ್ಡಿ ಅವರ ಸವಾಲಿನಂತೆ ಹೈಕಮಾಂಡ್ ಸಿದ್ದರಾಮಯ್ಯಅವ-ರಿಂದ ರಾಜೀನಾಮೆ ಕೊಡಿಸಿ, ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡಿದ್ದಲ್ಲದೇ ಶಾಸಕಾಂಗ ಸಭೆಯಲ್ಲಿ ಅದನ್ನು ಅಂಗೀಕರಿಸುವಂತೆ ಮಾಡುವಲ್ಲಿ ಯಶಸ್ವಿಯಾಗಿ-ತ್ತು. ರಾಯರೆಡ್ಡಿ ಅವರು, ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುತ್ತಿದ್ದಂತೆ ಸಚಿವ ಸಂಪುಟ ಸೇರುವ ಆಸೆಯನ್ನೇ ಕೈ ಬಿಟ್ಟಿದ್ದರು. ಅದರೂ ಪರೋಕ್ಷವಾಗಿ ಬೆಂಬಲಿಗರ ಮೂಲಕ ವಿಶೇಷ ಪೂಜೆ, ಪ್ರಾರ್ಥನೆಗಳ ಮೂಲಕ ಒತ್ತಡ ಹೇರುವ ತಂತ್ರ ಅನುಸರಿಸುತ್ತಿದ್ದಾರೆ. ಈ ಹಿಂದೆ ಮಾಜಿ ಸಚಿವ ಶಿವರಾಜ ತಂಗಡಗಿ ಬೆಂಬಲಿಗರು ಸಚಿವ ಸ್ಥಾನಕ್ಕಾಗಿ ಪ್ರತಿಭಟನೆ ನಡೆಸಲು ಮುಂದಾಗಿದ್ದರು. ಅದನ್ನು ತಡೆದಿದ್ದ ಶಿವರಾಜ ತಂಗಡಗಿ ಪ್ರತಿಭಟನೆ ನಡೆಸುವುದರಿಂದ ಪಕ್ಷಕ್ಕೆ ಹಾನಿಯಾಗಲಿದೆ. ಪೂಜೆ, ಪ್ರಾರ್ಥನೆಗಳ ಮೂಲಕ ಒತ್ತಡ ಹೇರಿದರೆ ಸಾಕು ಎಂದು ಸಲಹೆ ನೀಡಿದ್ದರು.

ಕೆಲವು ಶಾಸಕರು ಪ್ರಮುಖ ನಾಯಕರನ್ನು ಭೇಟಿ ಮಾಡಿ ನೇರವಾಗಿ ಒತ್ತಡ ಹೇರುವ ಪ್ರಯತ್ನ ನಡೆಸುತ್ತಿದ್ದಾರೆ. ಇನ್ನೂ ಕೆಲವರು ಹಿಂಬಾಲಕರ ಮೂಲಕ ಪ್ರತಿಭಟನೆ ನಡೆಸಿ, ಶತಾಯಗತಾಯ ಸಂಪುಟ ಸೇರಲೇಬೇಕೆಂದು ಜಿದ್ದಿಗೆ ಬಿದ್ದಿದ್ದಾರೆ. ಬೆಂಬಲಿಗರ ಪ್ರತಿಭಟನೆಗಳು ಕಾಂಗ್ರೆಸ್ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕುವಂತೆ ಮಾಡಿವೆ. ಸಚಿವ ಸ್ಥಾನ ಸಿಗದೇ ಅಸಮಾಧಾನಗೊಂಡಿರುವವರು ಬಂಡಾಯದ ಬಾವುಟ ಹಿಡಿಯುವ ಲಕ್ಷಣಗಳು ಗೋಚರಿಸುತ್ತಿವೆ.

# ಟ್ರಂಪ್ ಎದುರೇ ನೇರವಾಗಿ ಜಾಗತಿಕ ನಷ್ಟದ ಬಗ್ಗೆ ಪ್ರಸ್ತಾಪಿಸಿದ ಪ್ರಧಾನಿ ಮೋದಿ

**ಏವಿಯನ್-ಲೆ-ಬೈನ್ಸ್;** ಅಮೆರಿಕ-ಇರಾನ್ ಯುದ್ಧದಿಂದ ಆಗುತ್ತಿರುವ ನಷ್ಟದ ಬಗ್ಗೆ ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಟ್ರಂಪ್ ಎದುರೇ ಹೇಳಿಕೆ ನೀಡುವ ಮೂಲಕ ಪ್ರತ್ಯಕ್ಷವಾಗಿ ತಮ್ಮ ಅಸಮಾಧಾನ ಹೊರಹಾಕಿದ್ದಾರೆ.

ಫ್ರಾನ್?ಸನಲ್ಲಿ ನಡೆಯುತ್ತಿರುವ ಜಿ7 ಶೃಂಗಸಭೆಯಲ್ಲಿ ಭಾರತ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭೇಟಿಯಾಗಿ, ಪರಸ್ಪರ ಕುಶಲೋಪರಿ ವಿಚಾರಿಸಿದ್ದಾರೆ. ಜಿ7 ಶೃಂಗದಲ್ಲಿ ಹೊಸ ಪಾಲುದಾರಿಕೆ ರೂಪಿಸುವುದು ಮತ್ತು ಅಂತಾರಾಷ್ಟ್ರೀಯ ಒಗ್ಗಟ್ಟಿನ ಪುನರ್ನಿರ್ಮಾಣ ಕುರಿತಾಗಿ ಅಧಿವೇಶನ ಉದ್ದೇಶಿಸಿ ಮಾತನಾಡಿದ ಮೋದಿ ಅವರು, ಅಮೆರಿಕದ ಮಿಲಿಟರಿ ದಾಳಿಯಲ್ಲಿ ಇತ್ತೀಚೆಗೆ ಸಾವನ್ನಪ್ಪಿದ ಭಾರತೀಯ ನಾವಿಕರ ವಿಷಯ ಪ್ರಸ್ತಾಪಿಸಿದರು. ಟ್ರಂಪ್ ಸಮ್ಮುಖದಲ್ಲೇ ಭಾರತೀಯ ನಾವಿಕರ ಸುರಕ್ಷತೆ ಬಗ್ಗೆ ದನಿ ಎತ್ತಿದರು.ಅಮೆರಿಕ-ಇರಾನ್ ಸಂಘರ್ಷವು ಆ ಪ್ರದೇಶದಲ್ಲಿರುವ ದೇಶಗಳ ಮೇಲೆ ಗಮನಾರ್ಹ ಮಾನವ ಮತ್ತು ಆರ್ಥಿಕ ನಷ್ಟವನ್ನ ಉಂಡುಮಾಡಿದೆ ಎಂದು ಅವರು ಹೇಳಿದರು.

ಸದ್ಯ ಪಶ್ಚಿಮ ಏಷ್ಯಾದಲ್ಲಿ ಶಾಂತಿ ಒಪ್ಪಂದದಲ್ಲಿ ಪ್ರಗತಿಯನ್ನ ನಾವು ಸ್ವಾಗತಿಸುತ್ತೇವೆ. ಆದರೆ, ಕಳೆದ ಕೆಲ ದಿನಗಳಲ್ಲಿ ನಮ್ಮ ಮಿತ್ರ ರಾಷ್ಟ್ರಗಳಲ್ಲಿ ಜೀವ ಮತ್ತು ಆಸ್ತಿಪಾಸ್ತಿ ನಷ್ಟಕ್ಕೆ ಈ ಸಂಘರ್ಷ ಕಾರಣವಾಗಿದೆ. ಹಾರ್ಮುಜ್ ಜಲಸಂಧಿಯ ನಿರ್ಬಂಧದಿಂದ ಸಮುದ್ರ ವ್ಯಾಪಾರಕ್ಕೆ ಉಂಟಾದ ಅಡ್ಡಿಯು ಜಾಗತಿ-ಕ ಆರ್ಥಿಕತೆಯ ಮೇಲೆ ಪರಿಣಾಮ ಬೀರಿದೆ. ಹಲವಾರು ಭಾರತೀಯರೂ ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ ಎಂದು ಗಮನ ಸೆಳೆದರು. ಇನ್ನೂ ಪಶ್ಚಿಮ ಏಷ್ಯಾ ಸಂಘರ್ಷದ ವ್ಯಾಪಕ ಪರಿಣಾಮ ಎತ್ತಿ ತೋರಿಸಿದ ಪ್ರಧಾನಿ, ಸಮುದ್ರ ವ್ಯಾಪಾರದಲ್ಲಿನ ಅಡಚಣೆಗಳು ಮತ್ತು ಪ್ರಮುಖ ಹಡಗು ಕಾರಿಡಾರ್‌ಗಳಲ್ಲಿ ಕಾರ್ಯನಿರ್ವಹಿಸುವ ನಾವಿಕರು ಎದುರಿಸುತ್ತಿರುವ ಅಪಾಯಗಳ ಬಗ್ಗೆ ಗಮನ ಸೆಳೆದರು.

ಜಾಗತಿಕ ಸಮುದ್ರ ವ್ಯಾಪಾರದ ಮೂಲಕ ರಾಷ್ಟ್ರಗಳನ್ನು ಸಂಪರ್ಕಿಸುವ ನಾವಿಕರ ಸುರಕ್ಷತೆ ಖಚಿತಪಡಿಸಿಕೊಳ್ಳುವುದು



ನಮ್ಮ ಸಾಮೂಹಿಕ ಜವಾಬ್ದಾರಿಯಾಗಿದೆ. ಸಮುದ್ರ ಮಾರ್ಗಗಳು ಸುರಕ್ಷಿತವಾಗಿರುವುದನ್ನ ಮತ್ತು ನಾವಿಕರು ಭಯವಿಲ್ಲದೆ ತಮ್ಮ ಕರ್ತವ್ಯ ನಿರ್ವಹಿಸಬಹುದು ಎಂಬುದನ್ನ ನಾವು ಖಚಿತಪಡಿಸಿಕೊಳ್ಳಬೇಕು. ಅದಕ್ಕಾಗಿ ಅಂತಾರಾಷ್ಟ್ರೀಯ ಸಹಕಾರ ಬಲಪಡಿಸಲು ಭಾರತ ಎಲ್ಲಾ ದೇಶಗಳೊಂದಿಗೆ ಕೆಲಸ ಮಾಡಲು ಸಿದ್ಧವಾಗಿದೆ ಎಂದು ಪ್ರಧಾನಿ ಹೇಳಿದರು. ಅಮೆ-ರಿಕ ಅಧ್ಯಕ್ಷರೊಂದಿಗಿನ ದ್ವಿಪಕ್ಷೀಯ ಮಾತುಕತೆಗೆ ಒಂದು ದಿನ ಮೊದಲು ಪ್ರಧಾನಿ ಮೋದಿ ಈ ವಿಷಯ ಪ್ರಸ್ತಾಪಿಸಿರುವುದು ವಿಶೇಷವಾಗಿದೆ.

"JANASHREE TIMES" Kannada daily morning Owner, Published by ANANDAYYA DANAYYA VIRAKTAMATH Address: 229/1, 3 RD CROSS VIVEKANAND NAGAR NEAR WATER TANK, GADAG, KARNATAKA - 582101. Printed at: SHIVANI PRINTERS Printers. Address: AT: HULKOTI T/D: GADAG OFFICE ADDERS: SHIVANI PRINTERS NEW COURT OPPSITE PLOT NO 28 RS NO 312/3B GARAG COMPLEX, GADAG, KARNATAKA - 582101. email: janashreetimes@gmail.com